# ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಅಧಿನಿಯಮ (ಪೋಕ್ಸೋ)–2012 ತಿದ್ದುಪಡಿ–2019, ನಿಯಮಗಳು 2020

# The Protection of Children From Sexual Offences Act (POCSO) 2012 Amendment-2019, Rules 2020

# Handled Topics:

**Violence against Children and responsibilities of Stakeholders. Issues, Legislation and procedures.**

- **Child Rights**
- **Juvenile Justice (Care and Protection of Children) Act – 2015 Rules 2016**
- **The Prohibition of Child Marriage Act, 2006, Karnataka Amendment - 2016**
- **The Protection of Children From Sexual Offences Act (POCSO) 2012Amendment-2019 Rules 2012 & 2020**
- **The Child and Adolescent Labour (Prohibition & Regulation) Act-1986, Amendment-2016**
- **Child Begging**
- **Missing children.**

# Handled Topics:

**Violence against Women: Issues, legislation and procedures.**

- New Criminal Law 2023, Chapter-5

**Offences against Women and Child**

- Protection of women from Domestic Violence Act-2005 (D.V Act)
- Dowry Prohibition Act-1961 Amendment -1984
- The Sexual Harassment of Women at Workplace (Prevention, Prohibition and Redressal) Act 2013

POSH 2019

# ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ

- ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ವಿಶ್ವಸಂಸ್ಥೆ ನವೆಂಬರ್–20 1989ನೇ ಇಸವಿಯಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಜಾರಿಗೆ ತಂದಿದೆ.

  **UNCRC - United Nations Convention on Rights of The Child**

- ಭಾರತ ಸರ್ಕಾರ ಈ ಒಡಂಬಡಿಕೆಗೆ ಡಿಸೆಂಬರ್–11 1992ರಲ್ಲಿ ಸಹಿ ಮಾಡಿ ಒಪ್ಪಿಕೊಂಡಿದೆ.

- ಇದರಲ್ಲಿ ಒಟ್ಟು 54 ಪರಿಚ್ಛೇದಗಳಿವೆ.

  ಪರಿಚ್ಛೇಧ–3(1) ಮಕ್ಕಳ ಹಿತದೃಷ್ಠಿ

  ಪರಿಚ್ಛೇಧ–34 ಎಲ್ಲಾ ರೀತಿಯ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯುವುದು ಮಕ್ಕಳ ಹಕ್ಕಾಗಿದೆ & ಮಕ್ಕಳ ಮೇಲಿನ ಒಪ್ಪಿತ ಲೈಂಗಿಕ ಕ್ರಿಯೆಗೆ ಅವಕಾಶವಿಲ್ಲ.

**ಇದರಲ್ಲಿ ಒಟ್ಟು 4 ಪ್ರಮುಖ ಹಕ್ಕುಗಳ ಗುಂಪುಗಳಿವೆ**

- ಬದುಕುವ ಹಕ್ಕು
  Right to Survival
- ರಕ್ಷಣೆಯ ಹಕ್ಕು
  Right to Protection
- ಅಭಿವೃದ್ಧಿ ಹೊಂದುವ ಹಕ್ಕು
  Right to Development
- ಭಾಗವಹಿಸುವ ಹಕ್ಕು
  Right to Participation

# Child Sexual Violence – Tip of the Iceberg!
## ನೀರಿನಲ್ಲಿ ಮುಳುಗಿರುವ ಮಂಜುಗಡ್ಡೆಯಂತೆ



ವರದಿಯಾದ ಲೈಂಗಿಕ ಅಪರಾಧಗಳು

ವರದಿಯಾಗದ ಲೈಂಗಿಕ ಅಪರಾಧಗಳು

ಅರಿವಿನ ಕೊರತೆ

ಸಾಮಾಜಿಕ ಕಳಂಕ

ಅನೇಕ ಪ್ರಕರಣಗಳಲ್ಲಿ ಆರೋಪಿ

ಕುಟುಂಬದ ಸದಸ್ಯ



What you don't know
CAN hurt me.
More than 70% of child sex abuse cases involve a relative, friend or someone else close to the child.
- NSPCC
Be sure, BEFORE.
www.facebook.com/ActionAgainstAbuseUK

# ಪ್ರಕರಣ

ನೊಂದ ಬಾಲಕಿಯಾದ ಕು॥ 15 ವರ್ಷ, ಠಾಣೆಗೆ ಹಾಜರಾಗಿ ನೀಡಿದ ದೂರು ನನ್ನ ತಂದೆ ಮರಣ ಹೊಂದಿದ್ದು, ನನ್ನ ತಾಯಿ & ನಾನು ಮಾವನವರ ಮನೆಯಲ್ಲಿ ವಾಸವಾಗಿರುತ್ತೇವೆ. ಮಾವನ ಮಗ 25 ವರ್ಷ ನಾನು ಸ್ನಾನ ಮಾಡುವ ಸಮಯದಲ್ಲಿ ನನ್ನ ನಗ್ನ ವಿಡಿಯೋಗಳನ್ನು ರೆಕಾರ್ಡ್ ಮಾಡಿಕೊಂಡು, ಈ ವಿಡಿಯೋಗಳನ್ನು ಎಲ್ಲರಿಗೂ ಕಳುಹಿಸುವುದಾಗಿ ಭಯಪಡಿಸಿ ಬಲವಂತವಾಗಿ ಬೇರೆ ಬೇರೆ ಸ್ಥಳಗಳಿಗೆ ಕರೆದುಕೊಂಡು ಹೋಗಿ ಲೈಂಗಿಕ ಸಂಪರ್ಕ ಮಾಡಿರುತ್ತಾನೆ, ಈ ವಿಡಿಯೋಗಳನ್ನು ಆತನ ಸ್ನೇಹಿತನಿಗೂ ಸಹ ಕಳುಹಿಸಿದ್ದು, ಆತನು ಸಹ ನನಗೆ ಎದುರಿಸಿ ಅನೇಕ ಬಾರಿ ಗುಪ್ತಾಂಗಗಳನ್ನು ಮುಟ್ಟಿ ಲೈಂಗಿಕ ಕಿರುಕುಳ ನೀಡಿ ಲೈಂಗಿಕ ಸಂಪರ್ಕಕ್ಕೆ ಒತ್ತಾಯಪಡಿಸಿರುತ್ತಾನೆ. ಆದ್ದರಿಂದ ನನ್ನ ಮೇಲೆ ಲೈಂಗಿಕ ದೌರ್ಜನ್ಯ ಮಾಡಿದ ಇವರುಗಳ ವಿರುದ್ಧ ಸೂಕ್ತ ಕಾನೂನು ರೀತ್ಯ ಕ್ರಮ ಕೈಗೊಳ್ಳುವಂತೆ ಕೋರಿ ನೀಡಿದ ದೂರು.

- ಐಪಿಸಿ ಕಲಂ.376(3), 376(2) (ಎನ್), 354ಎ, 354ಸಿ, 511
- ಬಿಎನ್‌ಎಸ್ ಕಲಂ: 65(1), 64(2) (ಜೆ), (ಎಂ), 75(2), 77, 62
- ಪೋಕ್ಸೋ ಆಕ್ಟ್, 4(2), 5 (ಎಲ್), (ಎನ್), 6, 9 (ಪಿ), 10, 14, 15, 18
- ಐಟಿ ಆಕ್ಟ್, 66(ಇ), 67

# ಪೋಕ್ಸೋ ಕಾಯ್ದೆಯ ಜಾರಿ

- ಪೋಕ್ಸೋ ಕಾಯ್ದೆ ರಚನೆಯ ಪ್ರಕ್ರಿಯೆಯು 2008 ರಲ್ಲಿ ಪ್ರಾರಂಭವಾಯಿತು.
- ಪೋಕ್ಸೋ ಕಾಯ್ದೆಯನ್ನು ಮೇ–10, 2012 ರಲ್ಲಿ ರಾಜ್ಯಸಭೆಯಲ್ಲಿ ಅನುಮೋದಿಸಲಾಗಿದೆ.
- ಪೋಕ್ಸೋ ಕಾಯ್ದೆಯನ್ನು ಮೇ–22, 2012 ರಲ್ಲಿ ಲೋಕಸಭೆಯಲ್ಲಿ ಅನುಮೋದಿಸಲಾಗಿದೆ.
- ಪೋಕ್ಸೋ ಕಾಯ್ದೆ ಜೂನ್–19, 2012 ರಲ್ಲಿ ಗೆಜೆಟ್‌ನಲ್ಲಿ ಪ್ರಕಟವಾಯಿತು.
- **ದಿನಾಂಕ: 14.11.2012 ರಂದು ಕಾಯ್ದೆ ಜಾರಿಗೆ.**

# ಪೋಕ್ಸೋ ಕಾಯ್ದೆಯ ಹಿನ್ನಲೆ

- ಪುನ: ಪುನ: ಬಾಧಿತರಾಗುವ ಪ್ರಕ್ರಿಯೆ
- ಆರೋಪಿಗಳು ಕಾನೂನು ಕುಣಿಕೆಯಿಂದ ತಪ್ಪಿಸಿಕೊಳ್ಳುವುದು
- ಎಲ್ಲ ರೀತಿಯ ಲೈಂಗಿಕ ಅಪರಾಧಗಳು ಒಳಗೊಳ್ಳದಿರುವುದು
- ಪ್ರಕರಣಗಳ ಹೆಚ್ಚಳ.
- ಮಗುಸ್ನೇಹಿ ವಾತಾವರಣ ಇಲ್ಲದಿರುವುದು.

# ಈ ಕಾಯ್ದೆಯ ಅಗತ್ಯತೆ

- ಐಪಿಸಿ ಒಳಗೊಂಡತೆ ಯಾವುದೇ ಕಾನೂನು ಮಕ್ಕಳ ವಿರುದ್ಧದ ಎಲ್ಲಾ ರೀತಿಯ ಲೈಂಗಿಕ ಅಪರಾಧಗಳ ವಿವರಣೆಯನ್ನು ಒಳಗೊಂಡಿರಲಿಲ್ಲ.

- ಯಾವುದೇ ಕಾನೂನು ಗಂಡು ಮಕ್ಕಳ ಮೇಲಿನ ಲೈಂಗಿಕ ಅಪರಾಧಗಳ ಬಗ್ಗೆ ವಿವರಣೆ ನೀಡಿರಲಿಲ್ಲ.

- ಈ ಹಿಂದಿನ ಕಾನೂನಿನ್ವಯ ವಿಚಾರಣೆಯಲ್ಲಿ ಮಕ್ಕಳ ಮೇಲಿನ ಪುನರಾವರ್ತಿತ ಹಿಂಸೆ ಹೆಚ್ಚಾಗಿತ್ತು.
- POCSO & KID WITH POCSO 2021 TO 2024 JUNE.xlsx

# 9–ಅಧ್ಯಾಯಗಳು, 46–ಪರಿಚ್ಛೇದಗಳನ್ನೊಳಗೊಂಡಿದೆ

1. ಪ್ರಾರಂಭ/ ಪೀಠಿಕೆ
2. ಮಕ್ಕಳ ವಿರುದ್ಧ ಲೈಂಗಿಕ ಅಪರಾಧ
3. ಮಕ್ಕಳನ್ನು ಅಶ್ಲೀಲ ಚಿತ್ರಗಳ ರಚನೆಯ ಉದ್ದೇಶಕ್ಕಾಗಿ ಬಳಸಿಕೊಳ್ಳುವುದು
4. ಅಪರಾಧವನ್ನೆಸಗಲು ಪ್ರಯತ್ನಿಸುವುದು ಮತ್ತು ಪ್ರೇರೇಪಿಸುವುದು.
5. ವ್ಯವರಣೆಗಳನ್ನು ವರದಿ ಮಾಡುವ ನಿಯಮಗಳು
6. ಮಗುವಿನ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲು ನಿಯಮಗಳು
7. ವಿಶೇಷ ನ್ಯಾಯಾಲಯಗಳು
8. ಸಾಕ್ಷಿಗಳನ್ನು ದಾಖಲಿಸುವಲ್ಲಿ ವಿಶೇಷ ನ್ಯಾಯಾಲಯದ ಅಧಿಕಾರ
9. ಇತರೆ ಅಂಶಗಳು.

# ಪೋಕ್ಸೋ ಕಾಯ್ದೆಯ ಪ್ರಮುಖಾಂಶಗಳು

- **ಮಗು ಎಂದರೆ 18 ವರ್ಷದೊಳಗಿನವರು BNS 2(3)**
- ದಿನಾಂಕದ 22.12.2023ರ ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ ಹೊರಡಿಸಿದ ಸುತ್ತೋಲೆ ಸಂಖ್ಯೆ Circular No. 08 of 2023ರ ಪ್ರಕಾರ, ಮಗುವಿನ ವಯಸ್ಸನ್ನು ಸಾಬೀತುಪಡಿಸಲು ಆಧಾರ್ ಅನ್ನು ದಾಖಲೆಯಾಗಿ ಬಳಸಲಾಗುವುದಿಲ್ಲ. **School Letter 01.08.2024.docx**
- **ಒಪ್ಪಿತ ಲೈಂಗಿಕ ಕ್ರಿಯೆಗೆ ಅವಕಾಶವಿಲ್ಲ.** BNS 63.docx
- **ಲೈಂಗಿಕ ಅಪರಾಧಗಳು**
- **ಗಂಡು/ಹೆಣ್ಣು ಒಳಗೊಂಡಿದೆ**
- **ವ್ಯವಸ್ಥೆಗಳು**
- **ಕಡ್ಡಾಯ ವರದಿ ದಾಖಲು**
- **ಸಂಸ್ಥೆಗಳ ಪಾತ್ರ ಮತ್ತು ಕರ್ತವ್ಯ**
- **ವಿಶೇಷ ನ್ಯಾಯಾಲಯ**

# ಪೋಕ್ಸೋ ಕಾಯ್ದೆಯ ಪ್ರಮುಖಾಂಶಗಳು

- ಮಗುಸ್ನೇಹಿ ಪ್ರಕ್ರಿಯೆ
- ವೈದ್ಯಕೀಯ ನೆರವು
- ಪರಿಹಾರ
- ಸಹಾಯ ವ್ಯಕ್ತಿ  ನಿಯಮ
- ನಿಯಮಗಳು
- ತುರ್ತು ಪ್ರಕ್ರಿಯೆ ಮತ್ತು ವಿಲೇವಾರಿ
- ಆರೋಪಿತ ತನ್ನ ಮುಗ್ದತೆ ಮನವರಿಕೆ ಮಾಡುವ ಜವಾಬ್ದಾರಿ

**Burden of proof**

# ಕಾಯ್ದೆಯಡಿ ಅಪರಾಧಗಳು

ಅಂಗಭೇದಕ ಲೈಂಗಿಕ ಆಕ್ರಮಣ

**Sec. 4 Penetrative Sexual assault**

ತೀವ್ರತರ ಅಂಗಭೇದಕ ಲೈಂಗಿಕ ಆಕ್ರಮಣ

**Sec.6 Aggravated Penetrative Sexual assault**

ಲೈಂಗಿಕ ಹಲ್ಲೆ

**Sec. 8 Sexual assault**

ತೀವ್ರತರ ಲೈಂಗಿಕ ಹಲ್ಲೆ

**Sec.10 Aggravated Sexual assault**

ಲೈಂಗಿಕ ಕಿರುಕುಳ

**Sec.12 Sexual Harassment**

# ಕಾಯ್ದೆಯಡಿ ಅಪರಾಧಗಳು

**ಅಶ್ಲೀಲ ಚಿತ್ರ ತಯಾರಿಕೆಗೆ ಮಕ್ಕಳ ಬಳಕೆ**

**Sec. 14 using a child for Pornographic purposes**

**ಮಕ್ಕಳನ್ನೊಳಗೊಂಡ ಅಶ್ಲೀಲ ಚಿತ್ರಗಳ ಸಂಗ್ರಹ**

**Sec. 15 Storage of Pornographic Material involving child**

**ಅಪರಾಧಕ್ಕೆ ದುಶ್ಪ್ರೇರಣೆ**

**Sec. 17 Abetment of an offence**

**ಅಪರಾಧಕ್ಕೆ ಪ್ರಯತ್ನ**

**Sec. 18 Attempt to commit an offence**

| ಅಪರಾಧ | ವ್ಯಾಖ್ಯಾನ | ಶಿಕ್ಷೆ–ದಂಡ |
|---|---|---|
| ಅಂಗಭೇದಕ ಲೈಂಗಿಕ ಆಕ್ರಮಣ<br>**Penetrative Sexual Assault**<br><br>**POCSO Amendment Act, 2019.pdf** | **ಕಲಂ–3**<br>ವ್ಯಕ್ತಿಯು,<br>(ಎ) ತನ್ನ ಶಿಶ್ನವನ್ನು, ಮಗುವಿನ ಯೋನಿಯ, ಬಾಯಿಯ, ಮೂತ್ರನಾಳದ ಅಥವಾ ಗುದದೊಳಗೆ ತೂರಿಸಿದರೆ ಅಥವಾ ತನಗೆ ಅಥವಾ ಯಾರೇ ಇತರ ವ್ಯಕ್ತಿಗೆ ಆ ಮಗುವು ಹಾಗೆ ಮಾಡುವಂತೆ ಮಾಡಿದರೆ; ಅಥವಾ<br>(ಬಿ) ಯಾವುದೇ ವಸ್ತುವನ್ನು ಅಥವಾ ಶಿಶ್ನ ಅಲ್ಲದ ದೇಹದ ಯಾವುದೇ ಭಾಗವನ್ನು, ಮಗುವಿನ ಯೋನಿಯ, ಮೂತ್ರನಾಳದ ಅಥವಾ ಗುದದೊಳಗೆ ತೂರಿಸಿದರೆ ಅಥವಾ ತನ್ನೊಡನೆ ಅಥವಾ ಯಾರೇ ಇತರ ವ್ಯಕ್ತಿಗೆ ಆ ಮಗುವು ಹಾಗೆ ಮಾಡುವಂತೆ ಮಾಡಿದರೆ; ಅಥವಾ<br>(ಸಿ) ಮಗುವಿನ ಯೋನಿಯ, ಮೂತ್ರನಾಳದ, ಗುದದ ಅಥವಾ ದೇಹದ ಯಾವುದೇ ಭಾಗದ ಒಳಗೆ ತೂರಿಸಲು ಮಗುವಿನ ದೇಹದ ಯಾವುದೇ ಭಾಗವನ್ನು ಆತ ಉದ್ರೇಕಿಸಿದರೆ ಅಥವಾ ತನಗೆ ಅಥವಾ ಯಾರೇ ಇತರ ವ್ಯಕ್ತಿಗೆ ಆ ಮಗುವು ಹಾಗೆ ಮಾಡುವಂತೆ ಮಾಡಿದರೆ; ಅಥವಾ<br>(ಡಿ) ಮಗುವಿನ ಶಿಶ್ನ, ಯೋನಿ, ಗುದದ್ವಾರ, ಮೂತ್ರನಾಳಕ್ಕೆ ತನ್ನ ಬಾಯಿಯನ್ನು ಹಾಕಿದರೆ ಅಥವಾ ಮಗುವು ಅಂಥ ವ್ಯಕ್ತಿಗೆ ಅಥವಾ ಯಾರೇ ಇತರ ವ್ಯಕ್ತಿಗೆ ಹಾಗೆ ಮಾಡುವಂತೆ ಮಾಡಿದರೆ,<br>ಅಂಥಹ ವ್ಯಕ್ತಿಯೂ " ಅಂಗಭೇದಕ ಲೈಂಗಿಕ ಹಲ್ಲೆ " ಯನ್ನು ಎಸಗಿದ್ದಾನೆಂದು ಹೇಳಲಾಗುತ್ತದೆ. | **ಕಲಂ–4(1)**<br>10 ವರ್ಷಗಳಿಗಿಂತ ಕಡಿಮೆಯಿಲ್ಲದ ಆಜನ್ಮ ಕಾರಾವಾಸದವರೆಗೆ ವಿಸ್ತರಿಸಬಹುದಾದಂಥ ಕಾರವಾಸದ ಶಿಕ್ಷೆ ಮತ್ತು ಜುಲ್ಮಾನೆ.<br>**ಕಲಂ–4(2)**<br>16 ವರ್ಷದೊಳಗಿನ ಮಗುವಿನ ಮೇಲೆ ಅಂಗಭೇದಕ ಲೈಂಗಿಕ ಹಲ್ಲೆ ಶಿಕ್ಷೆ<br>20 ವರ್ಷಗಳಿಗಿಂತ ಕಡಿಮೆಯಿಲ್ಲದ ಜೀವಾವಧಿ ಕಾರಾವಾಸದವರೆಗೆ ವಿಸ್ತರಿಸಬಹುದಾದಂಥ (ಆ ವ್ಯಕ್ತಿಯ ಬಾಕಿ ಸ್ವಾಭಾವಿಕ ಜೀವನದವರೆಗೆ) ಕಾರವಾಸದ ಶಿಕ್ಷೆ ಮತ್ತು |

# Aggravating Factors
## ಉಲ್ಬಣಗೊಳ್ಳುವ ಅಂಶಗಳ ಆಧಾರಗಳು

## Grounds (Section 5 & 9 of POCSO Act

**Status of the Accused - ಆರೋಪಿಯ ಸ್ಥಿತಿ**

**Nature of the Assault - ದಾಳಿಯ ಸ್ವರೂಪ**

**Impact on the Victim - ಬಲಿಪಶುವಿನ ಮೇಲಿನ ಪರಿಣಾಮ**

**Status of the Victim - ಬಲಿಪಶುವಿನ ಸ್ಥಿತಿ**

| ಅಪರಾಧ | ವ್ಯಾಖ್ಯಾನ | ಶಿಕ್ಷೆ–ದಂಡ |
|---|---|---|
| ತೀವ್ರ ಅಂಗಭೇದಕ ಲೈಂಗಿಕ ಆಕ್ರಮಣ<br>**Aggravated Penetrative Sexual Assault** | **ಕಲಂ–5**<br>(ಎ) ಪೊಲೀಸ್ ಅಧಿಕಾರಿ (ಬಿ) ಸಶಸ್ತ್ರ ದಳ/ರಕ್ಷಣಾ ದಳದ ಸದಸ್ಯ<br>(ಸಿ) ಸಾರ್ವಜನಿಕ ನೌಕರ (ಡಿ) ಜೈಲ್/ಸುಧಾರಣಾ ಸಂಸ್ಥೆ ಸಿಬ್ಬಂದಿ<br>(ಇ) ಸಾರ್ವಜನಿಕ/ಖಾಸಗಿ ಆಸ್ಪತ್ರೆ<br>(ಎಫ್) ಶಿಕ್ಷಣ ಸಂಸ್ಥೆ/ಧಾರ್ಮಿಕ ಸಂಸ್ಥೆ<br>(ಜಿ) ಸಾಮೂಹಿಕ ಅಂಗಭೇದಕ ಲೈಂಗಿಕ ಆಕ್ರಮಣ<br>(ಎಚ್) ಘಾತಕ/ಮಾರಣಾಂತಿಕ/ಬೆಂಕಿಯುಗುಳುವ ಆಯುಧ ಬಳಕೆ<br>(ಐ) ದೈಹಿಕ ಕ್ಷತಿ/ ಲೈಂಗಿಕ ಅಂಗಗಳಿಗೆ ಗಾಯಗೊಳಿಸಿದರೆ<br>(ಜೆ) ಮಾನಸಿಕ ಘಾಸಿ/ಗರ್ಭಿಣಿ/ಹೆಚ್.ಐ.ವಿ/ಸಾವು<br>(ಕೆ) ಮಾನಸಿಕ/ದೈಹಿಕ ವಿಕಲಾಂಗತೆ ಮಗುವಿನ ದುರುಪಯೋಗ<br>(ಎಲ್) ಒಂದಕ್ಕಿಂತ ಹೆಚ್ಚು ಬಾರಿ ಲೈಂಗಿಕ ಆಕ್ರಮಣ<br>(ಎಂ) 12 ವರ್ಷದೊಳಗಿನ ಮಗು ಮೇಲೆ<br>(ಎನ್) ಪೋಷಕರು/ರಕ್ತಸಂಬಂಧಿಕರಿಂದ ಲೈಂಗಿಕ ಆಕ್ರಮಣ<br>(ಓ) ಮಕ್ಕಳ ಸೇವೆ ಒದಗಿಸುವ ಸಂಸ್ಥೆ<br>(ಪಿ) ನಂಬಿಕೆ ಇರುವ ವ್ಯಕ್ತಿ<br>(ಕ್ಯೂ) ಗರ್ಭಿಣಿ ಮಗು ಮೇಲೆ ಲೈಂಗಿಕ ಆಕ್ರಮಣ<br>(ಆರ್) ಕೊಲೆ ಪ್ರಯತ್ನ<br>(ಎಸ್) ಕೋಮು ಗಲಭೆ/ ನೈಸರ್ಗಿಕ ವಿಪತ್ತು ಸಮಯದಲ್ಲಿ<br>(ಟಿ) ಒಮ್ಮೆ ಶಿಕ್ಷಿತನಾದ ವ್ಯಕ್ತಿಯಿಂದ ಲೈಂಗಿಕ ಆಕ್ರಮಣ<br>(ಯು) ಅಂಗಭೇದಕ ಹಲ್ಲೆ ನಡೆಸಿ ನಗ್ನಗೊಳಿಸಿ ಸಾರ್ವಜನಿಕವಾಗಿ ಓಡಾಡಿಸುವುದು.<br>ಅಂಥಹ ವ್ಯಕ್ತಿಯೂ "ತೀವ್ರತರ ಅಂಗಭೇದಕ ಲೈಂಗಿಕ ಹಲ್ಲೆ " ಯನ್ನು ಎಸಗಿದ್ದಾನೆಂದು ಹೇಳಲಾಗುತ್ತದೆ | **ಕಲಂ–6**<br>20 ವರ್ಷಗಳಿಗಿಂತ ಕಡಿಮೆಯಿಲ್ಲದ ಜೀವಾವಧಿ ಕಾರಾವಾಸದವರೆಗೆ ವಿಸ್ತರಿಸಬಹುದಾದಂಥ (ಆ ವ್ಯಕ್ತಿಯ ಬಾಕಿ ಸ್ವಾಭಾವಿಕ ಜೀವನದವರೆಗೆ) ಅಥವಾ ಮರಣದಂಡನೆ ಶಿಕ್ಷೆ ಮತ್ತು ಜುಲ್ಮಾನೆ |

| ಅಪರಾಧ | ವ್ಯಾಖ್ಯಾನ | ಶಿಕ್ಷೆ–ದಂಡ |
|---|---|---|
| ಹಠ ಸಂಭೋಗಕ್ಕೆ ಶಿಕ್ಷೆ<br>**Punishment for Rape** | **IPC 376(1) / BNS 64(1)**<br>64(2) ರಲ್ಲಿಯ ಸಂದರ್ಭಗಳನ್ನು ಹೊರತುಪಡಿಸಿ, ಯಾರು ಈ ಅತ್ಯಾಚಾರದ ಅಪರಾಧಿಯಾಗಿರುತ್ತಾರೋ ಅವರಿಗೆ | 10 ವರ್ಷಗಳಿಗಿಂತ ಕಡಿಮೆಯಿಲ್ಲದ ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದಂಥ ಕಾರವಾಸದ ಶಿಕ್ಷೆ ಮತ್ತು ಜುಲ್ಮಾನೆ |
| | **IPC 376(2)/ BNS 64(2)**<br>(ಎ) ಪೊಲೀಸ್ ಅಧಿಕಾರಿ<br>(ಬಿ) ಸಾರ್ವಜನಿಕ ನೌಕರ<br>(ಸಿ) ಸಶಸ್ತ್ರ ದಳ/ರಕ್ಷಣಾ ದಳದ ಸದಸ್ಯ<br>(ಡಿ) ಜೈಲ್/ಸುಧಾರಣಾ ಸಂಸ್ಥೆ ಸಿಬ್ಬಂದಿ<br>(ಇ) ಸಾರ್ವಜನಿಕ/ಖಾಸಗಿ ಆಸ್ಪತ್ರೆ<br>(ಎಫ್) ಶಿಕ್ಷಣ ಸಂಸ್ಥೆ/ಧಾರ್ಮಿಕ ಸಂಸ್ಥೆ<br>(ಜಿ) ಕೋಮು ಗಲಭೆ ಸಂದರ್ಭ<br>(ಎಚ್) ಗರ್ಭಿಣಿಯೆಂದು ತಿಳಿದು ಮಹಿಳೆ ಮೇಲೆ<br>(ಐ) ಸಮ್ಮತಿಯನ್ನು ನೀಡಲು ಅಸಮರ್ಥಳಾದ ಮಹಿಳೆಯ ಮೇಲೆ<br>(ಜೆ) ಒಬ್ಬ ಮಹಿಳೆಯ ಮೇಲೆ ನಿಯಂತ್ರಣ ಅಥವಾ ಪ್ರಾಬಲ್ಯವನ್ನು ಹೊಂದಿದ ಸ್ಥಾನದಲ್ಲಿದ್ದು, ಅಂತಹ ಮಹಿಳೆಯ ಮೇಲೆ<br>(ಕೆ) ಮಾನಸಿಕ / ಅಸಮರ್ಥತೆಯಿಂದ ನರಳುತ್ತಿರುವ ಮಹಿಳೆ<br>(ಎಲ್) ಕೃತ್ಯದಿಂದ ಘೋರವಾದ ದೈಹಿಕ ಹಾನಿ/ ಅಂಗವಿಕಲತೆ<br>(ಎಂ) ಒಬ್ಬಳೇ ಮಹಿಳೆಯ ಮೇಲೆ ಪದೇ ಪದೇ ಅತ್ಯಾಚಾರವನ್ನು ನಡೆಸಿದರೆ. | 10 ವರ್ಷಗಳಿಗಿಂತ ಕಡಿಮೆಯಿಲ್ಲದ ಆಜೀವ ಕಾರಾವಾಸದವರೆಗೆ (ಆ ವ್ಯಕ್ತಿಯ ಬಾಕಿ ಸ್ವಾಭಾವಿಕ ಜೀವನದವರೆಗೆ) ವಿಸ್ತರಿಸಬಹುದಾದಂಥ ಕಾರವಾಸದ ಶಿಕ್ಷೆ ಮತ್ತು ಜುಲ್ಮಾನೆ. |

| ಅಪರಾಧ | ವ್ಯಾಖ್ಯಾನ ಮತ್ತು ಶಿಕ್ಷೆ–ದಂಡ |
|---|---|
| **IPC 376(3)**<br>**BNS 65(1)**<br>**16 ವರ್ಷದೊಳಗಿನ ಹೆಣ್ಣು ಮಗುವಿನ ಮೇಲೆ ಅತ್ಯಾಚಾರಕ್ಕೆ ಶಿಕ್ಷೆ**<br>**Punishment for rape on Girl under 16 years of age.** | **20 ವರ್ಷಗಳಿಗೆ ಕಡಿಮೆಯಿಲ್ಲದ ಅವಧಿಯ ಕಠಿಣ ಕಾರಾವಾಸದಿಂದ, ಆದರೆ ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಕಾರಾವಾಸ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.** |
| **IPC 376 AB**<br>**BNS 65(2)**<br>**12 ವರ್ಷದೊಳಗಿನ ಹೆಣ್ಣು ಮಗುವಿನ ಮೇಲೆ ಅತ್ಯಾಚಾರಕ್ಕೆ ಶಿಕ್ಷೆ**<br>**Punishment for rape on Girl under 12 years of age.** | **20 ವರ್ಷಗಳಿಗೆ ಕಡಿಮೆಯಿಲ್ಲದ ಅವಧಿಯ ಕಠಿಣ ಕಾರಾವಾಸದಿಂದ, ಆದರೆ ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಕಾರಾವಾಸ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೆ ಅಥವಾ ಮರಣದಂಡನೆ ಶಿಕ್ಷೆ**<br>**ದಂಡವು ಬಾದಿತ ಮಗುವಿನ ವೈದ್ಯಕೀಯ ವೆಚ್ಚಗಳು ಮತ್ತು ಪುನರ್ವಸತಿಯನ್ನು ಪೂರೈಸಲು.** |

| ಅಪರಾಧ | ವ್ಯಾಖ್ಯಾನ ಮತ್ತು ಶಿಕ್ಷೆ–ದಂಡ |
| --- | --- |
| **IPC 376A**<br>**BNS 66**<br>ಸಂತ್ರಸ್ತ ಮಹಿಳೆಗೆ ಮರಣವನ್ನುಂಟು ಮಾಡಿದ್ದರೆ ಅಥವಾ ನಿರ್ಜೀವ ಸ್ಥಿತಿಗೆ ಕಾರಣವಾದ ವ್ಯಕ್ತಿಗೆ ಶಿಕ್ಷೆ<br>**Punishment for causing Death or Resulting in Persistent vegetative state of victim** | 64(1) / 64(2) ರಲ್ಲಿಯ ಸಂದರ್ಭಗಳಲ್ಲಿ ಅಪರಾಧ ಮಾಡಿರುವಾಗ ಮತ್ತು ಅಪರಾಧವನ್ನು ಮಾಡುವಾಗ ಮರಣವನ್ನುಂಟು ಮಾಡುವಂಥ ಗಾಯವನ್ನು ಮಾಡಿದ್ದರೆ / ನಿರ್ಜಿವ ಜೀವನದ ಸ್ಥಿತಿಯಲ್ಲಿರುವಂತೆ ಮಾಡಿದ್ದರೆ ಯಾರು ಈ ಅತ್ಯಾಚಾರದ ಅಪರಾಧಿಯಾಗಿರುತ್ತಾರೋ ಅವರಿಗೆ 20 ವರ್ಷಗಳಿಗೆ ಕಡಿಮೆಯಿಲ್ಲದ ಅವಧಿಯ ಕಠಿಣ ಕಾರಾವಾಸದಿಂದ, ಆದರೆ ಆಜೀವ ಕಾರಾವಾಸದ ವರೆಗೆ ವಿಸ್ತರಿಸಬಹುದಾದ ಕಾರಾವಾಸ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೆ ಅಥವಾ ಮರಣದಂಡನೆ ಶಿಕ್ಷೆ |

| ಅಪರಾಧ | ವ್ಯಾಖ್ಯಾನ ಮತ್ತು ಶಿಕ್ಷೆ–ದಂಡ |
|---|---|
| **IPC 376D**<br>**BNS 70(1)**<br>**ಸಾಮೂಹಿಕ ಹಠ ಸಂಬೋಗ**<br>**Gang Rape.** | **ಒಬ್ಬ ವ್ಯಕ್ತಿ / ಹೆಚ್ಚಿನ ಜನರು ಗುಂಪೂಗೂಡಿ ತಮ್ಮ ಸಮಾನ ಉದ್ದೇಶವನ್ನು ಈಡೇರಿಕೊಳ್ಳಲು ಮಹಿಳೆಯೊಂದಿಗೆ ಹಠ ಸಂಭೋಗ ಮಾಡಿದರೆ, ಅವರಲ್ಲಿ ಪ್ರತಿಯೊಬ್ಬನೂ ಅಪರಾಧವನ್ನು ಮಾಡಿರುತ್ತಾನೆಂದು ಪೂರ್ವಭಾವನೆ ಮಾಡತಕ್ಕದ್ದು ಪ್ರತಿಯೊಬ್ಬರಿಗೂ.... 20 ವರ್ಷಗಳಿಗಿಂತ ಕಡಿಮೆಯಿಲ್ಲದ ಜೀವಾವಧಿ ಕಾರಾವಾಸ ದವರೆಗೆ ವಿಸ್ತರಿಸಬಹುದಾದಂಥ ಕಾರವಾಸದ ಶಿಕ್ಷೆ ಮತ್ತು ಜುಲ್ಮಾನೆ** |

| ಅಪರಾಧ | ವ್ಯಾಖ್ಯಾನ ಮತ್ತು ಶಿಕ್ಷೆ–ದಂಡ |
|---|---|
| **IPC 376DA 16 ವರ್ಷ**<br>**IPC 376DB 12 ವರ್ಷ**<br>**BNS 70(2)**<br>**18 ವರ್ಷದೊಳಗಿನ ಹೆಣ್ಣು ಮಗುವಿನ ಮೇಲೆ ಎಸಗಿದ ಸಾಮೂಹಿಕ ಬಲತ್ ಸಂಭೋಗಕ್ಕಾಗಿ ದಂಡನೆ**<br>**Punishment for Gang Rape on Girl under 18 years of age.** | **18 ವರ್ಷದೊಳಗಿನ ಹೆಣ್ಣು ಮಗುವಿನ ಮೇಲೆ ಒಬ್ಬ ವ್ಯಕ್ತಿ ಹೆಚ್ಚಿನ ಜನರು ಗುಂಪೂಗೂಡಿ/ ತಮ್ಮ ಸಮಾನ ಉದ್ದೇಶವನ್ನು ಈಡೇರಿಕೊಳ್ಳಲು ಮಹಿಳೆಯೊಂದಿಗೆ ಹಠ ಸಂಭೋಗ ಮಾಡಿದರೆ, ಅವರಲ್ಲಿ ಪ್ರತಿಯೊಬ್ಬನೂ ಅಪರಾಧವನ್ನು ಮಾಡಿರುತ್ತಾನೆಂದು ಪೂರ್ವಭಾವನೆ ಮಾಡತಕ್ಕದ್ದು ಪ್ರತಿಯೊಬ್ಬರಿಗೂ.... ಆ ವ್ಯಕ್ತಿಯ ಬಾಕಿ ಸ್ವಾಭಾವಿಕ ಜೀವನದವರೆಗೆ ವಿಸ್ತರಿಸಬಹುದಾದ ಶಿಕ್ಷೆ ಮತ್ತು ಜುಲ್ಮಾನೆ ಅಥವಾ ಮರಣ ದಂಡನೆ.**<br><br>**ದಂಡವು ಬಾದಿತ ಮಗುವಿನ ವೈದ್ಯಕೀಯ ವೆಚ್ಚಗಳು ಮತ್ತು ಪುನರ್ವಸತಿಯನ್ನು ಪೂರೈಸಲು.** |

| ಅಪರಾಧ | ವ್ಯಾಖ್ಯಾನ | ಶಿಕ್ಷೆ–ದಂಡ |
|---|---|---|
| ಲೈಂಗಿಕ ಹಲ್ಲೆ<br>**Sexual Assault** | **ಕಲಂ–7**<br><br>ಯಾವುದೇ ವ್ಯಕ್ತಿ, ಲೈಂಗಿಕ ಉದ್ದೇಶದಿಂದ ಮಗುವಿನ ಯೋನಿಯನ್ನು, ಶಿಶ್ನವನ್ನು, ಗುದವನ್ನು ಅಥವಾ ಮೊಲೆಯನ್ನು ಮುಟ್ಟಿದರೆ ಅಥವಾ ಅಂಥ ವ್ಯಕ್ತಿಯ ಅಥವಾ ಯಾರೇ ಇತರ ವ್ಯಕ್ತಿಗೆ ಮಗುವು ಮುಟ್ಟುವಂತೆ ಮಾಡಿದರೆ ಅಥವಾ ಲಿಂಗಭೇದನೆ ಇಲ್ಲದ ದೈಹಿಕ ಸಂಪರ್ಕವನ್ನು ಒಳಗೊಳ್ಳುವಂಥ ಲೈಂಗಿಕ ಉದ್ದೇಶದಿಂದ ಯಾವುದೇ ಇತರ ಕೃತ್ಯವನ್ನು ಎಸಗಿದರೆ. ಅಂಥಹ ವ್ಯಕ್ತಿಯೂ ಲೈಂಗಿಕ ಹಲ್ಲೆ ಎಸಗಿರುವನೆಂದು ಹೇಳಲಾಗುತ್ತದೆ. | **ಕಲಂ–8**<br><br>3 ವರ್ಷಗಳಿಗಿಂತ ಕಡಿಮೆಯಿಲ್ಲದ 5 ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಎರಡರಲ್ಲೊಂದು ಬಗೆಯ ಕಾರವಾಸದ ಶಿಕ್ಷೆ ಮತ್ತು ಜುಲ್ಮಾನೆ |

| ಅಪರಾಧ | ವ್ಯಾಖ್ಯಾನ | ಶಿಕ್ಷೆ–ದಂಡ |
|---|---|---|
| ತೀವ್ರತರ ಲೈಂಗಿಕ ಹಲ್ಲೆ<br>**Aggravated Sexual Assault** | ಕಲಂ–9<br>((ಎ) ಪೊಲೀಸ್ ಅಧಿಕಾರಿ (ಬಿ) ಸಶಸ್ತ್ರ ದಳ/ರಕ್ಷಣಾ ದಳದ ಸದಸ್ಯ<br>(ಸಿ) ಸಾರ್ವಜನಿಕ ನೌಕರ (ಡಿ) ಜೈಲ್/ಸುಧಾರಣಾ ಸಂಸ್ಥೆ ಸಿಬ್ಬಂದಿ<br>(ಇ) ಸಾರ್ವಜನಿಕ/ಖಾಸಗಿ ಆಸ್ಪತ್ರೆ<br>(ಎಫ್) ಶಿಕ್ಷಣ ಸಂಸ್ಥೆ/ಧಾರ್ಮಿಕ ಸಂಸ್ಥೆ<br>(ಜಿ) ಸಾಮೂಹಿಕ ಲೈಂಗಿಕ ಹಲ್ಲೆ<br>(ಎಚ್) ಘಾತಕ/ಮಾರಣಾಂತಿಕ/ಬೆಂಕಿಯುಗುಳುವ ಆಯುಧ ಬಳಕೆ<br>(ಐ) ದೈಹಿಕ ಕ್ಷತಿ/ ಲೈಂಗಿಕ ಅಂಗಗಳಿಗೆ ಗಾಯಗೊಳಿಸಿದರೆ<br>(ಜೆ) ಮಾನಸಿಕ ಘಾಸಿ/ಸಾವು<br>(ಕೆ) ಮಾನಸಿಕ/ದೈಹಿಕ ವಿಕಲಾಂಗತೆ ಮಗುವಿನ ದುರುಪಯೋಗ<br>(ಎಲ್) ಒಂದಕ್ಕಿಂತ ಹೆಚ್ಚು ಬಾರಿ ಹಲ್ಲೆ<br>(ಎಂ) 12 ವರ್ಷದೊಳಗಿನ ಮಗು ಮೇಲೆ<br>(ಎನ್) ಪೋಷಕರು/ರಕ್ತಸಂಬಂಧಿಕರಿಂದ ಹಲ್ಲೆ<br>(ಓ) ಮಕ್ಕಳ ಸೇವೆ ಒದಗಿಸುವ ಸಂಸ್ಥೆ<br>(ಪಿ) ನಂಬಿಕೆ ಇರುವ ವ್ಯಕ್ತಿ<br>(ಕ್ಯೂ) ಗರ್ಭಿಣಿ ಮಗು ಮೇಲೆ ಹಲ್ಲೆ<br>(ಆರ್) ಕೊಲೆ ಪ್ರಯತ್ನ<br>(ಎಸ್) ಕೋಮು ಗಲಭೆ/ ನೈಸರ್ಗಿಕ ವಿಪತ್ತು ಸಮಯದಲ್ಲಿ<br>(ಟಿ) ಈ ಕಾನೂನಿನಲ್ಲಿ ಒಮ್ಮೆ ಶಿಕ್ಷಿತನಾದ ವ್ಯಕ್ತಿಯಿಂದ ಹಲ್ಲೆ<br>(ಯು) ಲೈಂಗಿಕ ಹಲ್ಲೆ ನಡೆಸಿ ನಗ್ನಗೊಳಿಸಿ ಸಾರ್ವಜನಿಕವಾಗಿ ಓಡಾಡಿಸುವುದು.<br>(ವಿ) ಲೈಂಗಿಕ ಪ್ರೌಢತೆಯನ್ನು ಪಡೆಯುವ ಉದ್ದೇಶ | ಕಲಂ–10<br>5 ವರ್ಷಗಳಿಗಿಂತ ಕಡಿಮೆಯಿಲ್ಲದ 7 ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಎರಡರಲ್ಲೊಂದು ಬಗೆಯ ಕಾರವಾಸದ ಶಿಕ್ಷೆ ಮತ್ತು ಜುಲ್ಮಾನೆ |

| ಅಪರಾಧ | ವ್ಯಾಖ್ಯಾನ ಮತ್ತು ಶಿಕ್ಷೆ–ದಂಡ |
|---|---|
| **IPC 354A**<br>**BNS 75**<br>ಲೈಂಗಿಕ ಕಿರುಕುಳ ಮತ್ತು ಲೈಂಗಿಕ ಕಿರುಕುಳಕ್ಕಾಗಿ ಶಿಕ್ಷೆ.<br>**Sexual harassment and punishment for sexual harassment** | (1) ಒಬ್ಬ ಪುರುಷ ವ್ಯಕ್ತಿಯು ಕೆಳಕಂಡ ಕೃತ್ಯಗಳನ್ನು ಮಾಡಿದರೆ<br>i. ಲೈಂಗಿಕ ಬಹಿರಂಗ ಇಚ್ಚೆಯನ್ನು ಒಳಗೊಂಡು ದೈಹಿಕ ಸಂಪರ್ಕ ಮತ್ತು ಅದರ ಸಂಬಂಧ ಮುಂದುವರಿಕೆ.<br>ii. ಲೈಂಗಿಕ ಸಮ್ಮತಿಗಾಗಿ ಒತ್ತಾಯ ಅಥವಾ ಬೇಡಿಕೆ.<br>iii. ಒಬ್ಬ ಮಹಿಳೆಯ ಇಚ್ಚೆಗೆ ವಿರುದ್ಧವಾಗಿ ಅಶ್ಲೀಲ ಚಿತ್ರಗಳನ್ನು ತೋರಿಸುವುದು.<br>iv. ಲೈಂಗಿಕ ಅರ್ಥಭಾಯೆ ಬರುವಂತಹ ಮಾತುಗಳು/ ಅಭಿಪ್ರಾಯಗಳನ್ನು ನೀಡುವುದು,<br><br>(2)ಕಲಂ–354ಎರ ಉಪಕಲಂ i. ii. iii. ರಲ್ಲಿ ಅಪರಾಧಗಳನ್ನು ಮಾಡಿದರೆ 3 ವರ್ಷಗಳ ಅವಧಿಗೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆಯಿಂದ/ ಜುಲ್ಮಾನೆ/ ಇವೆರಡರಿಂದಲೂ ದಂಡಿತನಾಗತಕ್ಕದ್ದು,<br><br>(3)ಕಲಂ–354ಎರ ಉಪಕಲಂ iv. ರಲ್ಲಿ ಅಪರಾಧಗಳನ್ನು ಮಾಡಿದರೆ 1 ವರ್ಷಗಳ ಅವಧಿಗೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆಯಿಂದ/ ಜುಲ್ಮಾನೆ/ ಇವೆರಡರಿಂದಲೂ ದಂಡಿತನಾಗತಕ್ಕದ್ದು, |

| ಅಪರಾಧ | ವ್ಯಾಖ್ಯಾನ | ಶಿಕ್ಷೆ–ದಂಡ |
|---|---|---|
| ಲೈಂಗಿಕ ಕಿರುಕುಳ<br>**Sexual Harassment** | **ಕಲಂ–11**<br>ಯಾವುದೇ ವ್ಯಕ್ತಿ ಲೈಂಗಿಕ ಉದ್ದೇಶದಿಂದ,<br>**(i)** ಪದವನ್ನು ಅಥವಾ ಧ್ವನಿಯನ್ನು ಮಗುವು ಕೇಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ಉಚ್ಚರಿಸಿದರೆ/ ತನ್ನ ಅಂಗವನ್ನು ನೋಡಲಿ ಎಂದು ಅಂಗ ಸನ್ನೆಯನ್ನು ಅಥವಾ ವಸ್ತುವನ್ನು ಪ್ರದರ್ಶಿಸಿದರೆ.<br>**(ii)** ಮಗುವಿನ ದೇಹದ ಯಾವುದೇ ಭಾಗವನ್ನು ಅಂಥ ವ್ಯಕ್ತಿಯು/ ಯಾರೇ ಇತರ ವ್ಯಕ್ತಿಯು ನೋಡುವ ಹಾಗೆ ತೋರಿಸುವಂತೆ ಮಾಡಿದರೆ.<br>**(iii)** ಕಾಮಪ್ರಚೋದಕ ಉದ್ದೇಶಕ್ಕಾಗಿ ಯಾವುದೇ ರೂಪದಲ್ಲಿ/ ಮಾಧ್ಯಮದ ಮೂಲಕ ಮಗುವಿಗೆ ಯಾವುದೇ ವಸ್ತುವನ್ನು ತೋರಿಸಿದರೆ.<br>**(iv)** ವ್ಯಕ್ತಿಯೂ ಮಗುವನ್ನು ಸತತವಾಗಿ ಹಿಂಬಾಲಿಸಿದರೆ/ ಪ್ರತ್ಯಕ್ಷವಾಗಿ/ ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಮಗುವನ್ನು ಗಮನಿಸುತ್ತಿದ್ದರೆ /ಸಂಪರ್ಕಿಸುತ್ತಿದ್ದರೆ.<br>**(v)** ವ್ಯಕ್ತಿಯೂ ಮಗುವಿನ ದೇಹದ ಯಾವುದೇ ಭಾಗವನ್ನು/ ಲೈಂಗಿಕ ಕೃತ್ಯದಲ್ಲಿ ಮಗುವನ್ನು ತೊಡಗಿಸಿಕೊಂಡಿರುವುದನ್ನು ಯಾವುದೇ ರೂಪದ ಮಾಧ್ಯಮದಲ್ಲಿ ಬಳಸಿಕೊಳ್ಳುವದಾಗಿ ಮಗುವನ್ನು ಹೆದರಿಸಿದರೆ.<br>**(vi)** ಕಾಮ ಪ್ರಚೋದಕ ಉದ್ದೇಶಗಳಿಗಾಗಿ ಮಗುವನ್ನು ಪುಸಲಾಯಿಸಿದರೆ/ ಅದಕ್ಕೆ ಪ್ರತಿಫಲವಾಗಿ ಹಣ ನೀಡುವ ಆಮಿಷ ತೋರಿಸಿದರೆ. ಕೃತ್ಯದ ಹಿಂದಿನ ಉದ್ದೇಶ ಲೈಂಗಿಕ ಕಿರುಕುಳವಾಗಿದ್ದರೆ,<br>–ಅಂಥ ವ್ಯಕ್ತಿಯು ಮಗುವಿಗೆ ಲೈಂಗಿಕ ಕಿರುಕುಳ ನೀಡಿದ್ದಾನೆಂದು ಹೇಳಲಾಗುತ್ತದೆ. | **ಕಲಂ–12**<br>3 ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಎರಡರಲ್ಲೊಂದು ಬಗೆಯ ಕಾರವಾಸದ ಶಿಕ್ಷೆ ಮತ್ತು ಜುಲ್ಮಾನೆ |

| ಅಪರಾಧ | ವ್ಯಾಖ್ಯಾನ ಮತ್ತು ಶಿಕ್ಷೆ–ದಂಡ |
|---|---|
| **IPC 354C**<br>**BNS 77**<br>**ಇಣುಕು ನೋಟ**<br>**Voyeurism** | ವೈಯಕ್ತಿಕ ಕಾರ್ಯದಲ್ಲಿ ನಿರತಳಾದ ಒಬ್ಬ ಮಹಿಳೆ ಯಾವ ಸಂದರ್ಭದಲ್ಲಿ ತನ್ನನ್ನು ಯಾವುದೇ ವ್ಯಕ್ತಿ ನೋಡಬಾರದು ಎಂದುಕೊಳ್ಳುತ್ತಾಳೋ, ಅಂತಹ ಸಂದರ್ಭದಲ್ಲಿ ಇಣುಕಿ ನೋಡುವುದು/ ಛಾಯಾಗ್ರಹಣ ಮಾಡಿಕೊಂಡು ಅದನ್ನು ಪ್ರದರ್ಶಿಸಿದರೆ.<br><br>**ಮೊದಲನೆ ಅಪರಾಧದ ಸಂದರ್ಭದಲ್ಲಿ 1 ವರ್ಷದ ಅವಧಿಗೆ ಕಡಿಮೆಯಿಲ್ಲದ ಆದರೆ 3 ವರ್ಷಗಳ ಅವಧಿವರೆಗೆ ವಿಸ್ತರಿಸಬಹುದಾದ ಕಾರಾಗೃಹ ಶಿಕ್ಷೆ ಮತ್ತು ಜುಲ್ಮಾನೆ.**<br><br>**ಎರಡನೆಯ ಅಥವಾ ತದನಂತರದ ಅಪರಾಧಗಳಲ್ಲಿ 3 ವರ್ಷಗಳ ಅವಧಿಯವರೆಗೆ ಕಡಿಮೆಯಿಲ್ಲದ ಆದರೆ 7 ವರ್ಷಗಳ ಅವಧಿವರೆಗೆ ವಿಸ್ತರಿಸಬಹುದಾದ ಕಾರಾಗೃಹ ಶಿಕ್ಷೆ ಮತ್ತು ಜುಲ್ಮಾನೆ.** |

| ಅಪರಾಧ | ವ್ಯಾಖ್ಯಾನ ಮತ್ತು ಶಿಕ್ಷೆ–ದಂಡ |
|---|---|
| **IPC 354D**<br>**BNS 78**<br>**ದುರುದ್ದೇಶ ಪೂರ್ಣ ಬೆನ್ನತ್ತುವಿಕೆ**<br>**Stalking** | ವ್ಯಕ್ತಿಯು...<br>1. ಒಬ್ಬ ಮಹಿಳೆ ಸ್ಪಷ್ಟವಾಗಿ ನಿರಾಸಕ್ತಿ ತೋರಿದರೂ, ಅವಳನ್ನು ಹಿಂಬಾಲಿಸುವುದು, ಸಂಪರ್ಕಕ್ಕೆ ಬರಲು ಹಾತೊರೆಯುವುದು.<br><br>2. ಒಬ್ಬ ಮಹಿಳೆಯ ಅಂತರ್ಜಾಲ ಬಳಕೆಯನ್ನು, ವಿದ್ಯುನ್ಮಾನ ಅಂಚೆಯನ್ನು(ಇಮೇಲ್) / ಯಾವುದೇ ಇತರ ಸಂಪರ್ಕ ಸಾಧನಗಳ ಕದ್ದಾಲಿಕೆಯನ್ನು ಮಾಡಿದ್ದಾದರೇ.<br>ಭಯ/ ಮುಜುಗರವಾಗುವಂತೆ ಬಹುಕಾಲ ಹಿಂಬಾಲಿಸುವ ಅಪರಾಧವನ್ನು ಎಸಗಿದರೆ.<br><br>**ಮೊದಲನೆ ಅಪರಾಧದ ಸಂದರ್ಭದಲ್ಲಿ 1ವರ್ಷದ ಅವಧಿಗೆ ಕಡಿಮೆಯಿಲ್ಲದ ಆದರೆ 3 ವರ್ಷಗಳ ಅವಧಿವರೆಗೆ ವಿಸ್ತರಿಸಬಹುದಾದ ಕಾರಾಗೃಹ ಶಿಕ್ಷೆ ಮತ್ತು ಜುಲ್ಮಾನೆ.**<br><br>**ಎರಡನೆಯ ಅಥವಾ ತದನಂತರದ ಅಪರಾಧಗಳಲ್ಲಿ 3 ವರ್ಷಗಳ ಅವಧಿಯವರೆಗೆ ಕಡಿಮೆಯಿಲ್ಲದ ಆದರೆ 5 ವರ್ಷಗಳ ಅವಧಿವರೆಗೆ ವಿಸ್ತರಿಸಬಹುದಾದ ಕಾರಾಗೃಹ ಶಿಕ್ಷೆ ಮತ್ತು ಜುಲ್ಮಾನೆ.** |

| ಅಪರಾಧ | ವ್ಯಾಖ್ಯಾನ | ಶಿಕ್ಷೆ–ದಂಡ |
|---|---|---|
| ಮಗವನ್ನು ಅಶ್ಲೀಲ ಚಿತ್ರಗಳ ರಚನೆಯ ಉದ್ದೇಶಕ್ಕೆ ಬಳಕೆ<br>**using a child for Pornographic purposes** | **ಕಲಂ–13**<br>ಯಾವುದೇ ವ್ಯಕ್ತಿ<br>•ಮಗುವನ್ನು ಲೈಂಗಿಕ ಚಿತ್ರಗಳ ತಯಾರಿಕೆಯಲ್ಲಿ ಬಳಸಿಕೊಳ್ಳುವುದು.<br>•ಲೈಂಗಿಕ ಚಿತ್ರಗಳಲ್ಲಿ ಮಗುವಿನ ಲೈಂಗಿಕ ಅಂಗಾಂಗಗಳನ್ನು ಪ್ರದರ್ಶಿಸುವುದು.<br>•ಮಗು ಲೈಂಗಿಕ ಚಟುವಟಿಕೆಗಳಲ್ಲಿ ತೊಡಗಿರುವ ಅಥವಾ ತೊಡಗಿರುವಂತೆ ತೋರಿಸುವುದು. | **ಕಲಂ–14**<br>(1)5 ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಎರಡರಲ್ಲೊಂದು ಬಗೆಯ ಕಾರವಾಸದ ಶಿಕ್ಷೆ ಮತ್ತು ಜುಲ್ಮಾನೆ.<br>(2) ಕಲಂ–4(1)/4(2) ಜೊತೆಗೆ ಕಲಂ 14(1) ಕಾರವಾಸದ ಶಿಕ್ಷೆ ಮತ್ತು ಜುಲ್ಮಾನೆ.<br>(3) ಕಲಂ–6 ಜೊತೆಗೆ ಕಲಂ 14(1) ಕಾರವಾಸದ ಶಿಕ್ಷೆ ಮತ್ತು ಜುಲ್ಮಾನೆ.<br>(4) ಕಲಂ–8ರಂತೆ ಜೊತೆಗೆ ಕಲಂ 14(1) ಕಾರವಾಸದ ಶಿಕ್ಷೆ ಮತ್ತು ಜುಲ್ಮಾನೆ.<br>(5) ಕಲಂ–10ರಂತೆ ಜೊತೆಗೆ ಕಲಂ 14(1) ಕಾರವಾಸದ ಶಿಕ್ಷೆ ಮತ್ತು ಜುಲ್ಮಾನೆ. |

## Information Technology act 2000
## ಮಾಹಿತಿ ತಂತ್ರಜ್ಞಾನ ಕಾಯ್ದೆ–2000

| ಅಪರಾಧ | ವ್ಯಾಖ್ಯಾನ | ಶಿಕ್ಷೆ–ದಂಡ |
| --- | --- | --- |
| ಕಲಂ–66E ಖಾಸಗೀಕರಣದ ಉಲ್ಲಂಘನೆಗಾಗಿ ಶಿಕ್ಷೆ. Punishment for violation of privacy. | ಕಲಂ–66E ಯಾವನೇ ವ್ಯಕ್ತಿಯು, ವ್ಯಕ್ತಿಯ ಖಾಸಗೀತನವನ್ನು ಉಲ್ಲಂಘಿಸಿ/ ಅನುಮತಿ ಇಲ್ಲದೇ/ ಉದ್ದೇಶಪೂರ್ವಕವಾಗಿ ಆ ವ್ಯಕ್ತಿಯ ಗುಪ್ತಾಂಗಗಳ ಚಿತ್ರವನ್ನು ಸೆರೆಹಿಡಿದರೆ/ ಪ್ರಕಟಿಸಿದರೆ/ ಪ್ರಸಾರ ಮಾಡಿದರೆ. | 3 ವರ್ಷಗಳ ಕಾಲಾವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ 2 ಲಕ್ಷ ರೂಪಾಯಿಗಳಿವೆ ಮೀರಿದ ಜುಲ್ಮಾನೆ ಅಥವಾ ಇವರೆಡೂ ಶಿಕ್ಷೆಯಿಂದಲೂ ದಂಡಿತನಾಗತಕ್ಕದ್ದು. |

# Information Technology act 2000
# ಮಾಹಿತಿ ತಂತ್ರಜ್ಞಾನ ಕಾಯ್ದೆ–2000

| ಅಪರಾಧ | ವ್ಯಾಖ್ಯಾನ | ಶಿಕ್ಷೆ–ದಂಡ |
|---|---|---|
| ಕಲಂ –67<br>ವಿದ್ಯುನ್ಮಾನ ನಮೂನೆಯಲ್ಲಿ ಅಶ್ಲೀಲವಾದ ಮಾಹಿತಿಯನ್ನು ಪ್ರಕಟಿಸುವುದು.<br>Publishing for transmitting obscene material electronic form | ಕಲಂ–67<br>ಯಾವನೇ ವ್ಯಕ್ತಿಯಾಗಲಿ ವಿದ್ಯುನ್ಮಾನ ಮಾಧ್ಯಮದಲ್ಲಿ ಕಾಮ ಕೆರಳಿಸುವಂತಹ ಸಂಗತಿಗಳನ್ನು ಪ್ರಕಟಿಸಿದ್ದರೆ. | ಮೊದಲನೇ ಅಪರಾಧಕ್ಕಾಗಿ 3 ವರ್ಷಗಳವರೆಗೆ ವಿಸ್ತರಿಸಬಹುದಾದ ಮತ್ತು 5 ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ.<br><br>ಎರಡನೆಯ ಮತ್ತು ನಂತರದ ಘಟನೆಗಳಲ್ಲಿ 5 ವರ್ಷಗಳವರೆಗೆ ವಿಸ್ತರಿಸಬಹುದಾದ ಮತ್ತು 10 ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು. |

| ಅಪರಾಧ | ವ್ಯಾಖ್ಯಾನ ಮತ್ತು ಶಿಕ್ಷೆ–ದಂಡ |
|---|---|
| **ಮಗುವಿನ ಅಶ್ಲೀಲ ಚಿತ್ರಗಳ ಸಂಗ್ರಹಣೆ**<br>**Storage of Pornographic Material involving child**<br><br>ಆನ್‌ಲೈನ್‌ನಲ್ಲಿ ಮಕ್ಕಳ ಮೇಲಿನ ಲೈಂಗಿಕ ಕಿರುಕುಳ: ವಿಶೇಷ ಘಟಕ ಸ್ಥಾಪಿಸಿದ ಸಿಬಿಐ<br>ನವದೆಹಲಿ (ಪಿಟಿಐ): ಅಂತರ್ಜಾಲ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಮಕ್ಕಳ ಮೇಲಿನ ಲೈಂಗಿಕ ಕಿರುಕುಳ-ದೌರ್ಜನ್ಯ ತಡೆಗಟ್ಟಲು ಮತ್ತು ತನಿಖೆಯನ್ನು ನಡೆಸಲು ಸಿಬಿಐ ಹೊಸ ಘಟಕವನ್ನು ತೆರೆದಿದೆ ಎಂದು ಶುಕ್ರವಾರ ಅಧಿಕಾರಿಗಳು ತಿಳಿಸಿದ್ದಾರೆ.<br>ಮಕ್ಕಳ ಅಶ್ಲೀಲ ಚಿತ್ರಗಳು ಮತ್ತು ವಿಡಿಯೊ ಪ್ರಸಾರ ನಿಯಂತ್ರಣಕ್ಕೆ ಈ ಘಟಕ ಶ್ರಮಿಸಲಿದೆ. ಇದಕ್ಕೆ ಆನ್‌ಲೈನ್ ಚೈಲ್ಡ್ ಸೆಕ್ಷುವಲ್ ಅಬ್ಯುಸ್ ಅಂಡ್ ಎಕ್ಸ್‌ಪ್ಲಾಯ್ಟೇಶನ್ (ಒಸಿಎಸ್‌ಎಇ) ಎಂದು ಹೆಸರಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಈ ವಿಶೇಷ ಘಟಕವು, ವಿಡಿಯೊಗಳನ್ನು ಸೃಷ್ಟಿಸಿದವರು ಮತ್ತು ಹಂಚಿಕೊಂಡವರನ್ನಷ್ಟೇ ಅಲ್ಲದೆ, ಮಕ್ಕಳ ವಿಡಿಯೊಗಳಿಗಾಗಿ ಜಾಲತಾಣಗಳಲ್ಲಿ ಹುಡುಕಾಟ ನಡೆಸಿದವರು ಮತ್ತು ಡೌನ್‌ಲೋಡ್ ಮಾಡಿದವರ ಮಾಹಿತಿಯನ್ನು ಕಲೆಹಾಕಲಿದೆ. ಪೋಸ್ಕೊ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಿ ತನಿಖೆಯನ್ನೂ ನಡೆಸುತ್ತದೆ ಎಂದು ತಿಳಿಸಿದ್ದಾರೆ. | **ಕಲಂ–15**<br>**(1) ಮಗುವನ್ನು ಒಳಗೊಂಡ ಯಾವುದೇ ರೂಪದಲ್ಲಿ ಅಶ್ಲೀಲ ವಸ್ತುಗಳನ್ನು ಸಂಗ್ರಹಿಸುವ/ ಹೊಂದಿರುವ ಯಾವುದೇ ವ್ಯಕ್ತಿ... ಮಕ್ಕಳ ಅಶ್ಲೀಲತೆಯನ್ನು ಹಂಚಿಕೊಳ್ಳಲು / ರವಾನಿಸುವ ಉದ್ದೇಶದಿಂದ, ನಿಗದಿತ ಪ್ರಾಧಿಕಾರಕ್ಕೆ ನಾಶಪಡಿಸುವಂತೆ ವರದಿ ಮಾಡಲು ವಿಫಲವಾದರೆ 5 ಸಾವಿರ ರೂ ಗಳಿಗಿಂತ ಕಡಿಮೆಯಿಲ್ಲದ.. ಎರಡನೆಯ ಅಥವಾ ತದನಂತರದ ಅಪರಾಧದಲ್ಲಿ 10 ಸಾವಿರ ರೂ ಗಳಿಗಿಂತ ಕಡಿಮೆಯಿಲ್ಲದ ಜುಲ್ಮಾನೆ.**<br><br>**(2) ವರದಿ ಮಾಡುವ ಉದ್ದೇಶವನ್ನು ಹೊರತುಪಡಿಸಿ/ ನ್ಯಾಯಾಲಯ ಸಾಕ್ಷಿಯಾಗಿ ಬಳಸುವುದನ್ನು ಹೊರತುಪಡಿಸಿ.. ಯಾವುದೇ ಸಮಯದಲ್ಲಿ ಯಾವುದೇ ರೀತಿಯಲ್ಲಿ ಪ್ರಸಾರ ಮಾಡಲು / ಪ್ರದರ್ಶಿಸಲು / ವಿತರಿಸಲು ಮಗುವನ್ನು ಒಳಗೊಂಡ ಯಾವುದೇ ರೂಪದಲ್ಲಿ ಅಶ್ಲೀಲ ವಸ್ತುಗಳನ್ನು ಸಂಗ್ರಹಿಸುವ / ಹೊಂದಿರುವ ಯಾವುದೇ ವ್ಯಕ್ತಿಗೆ 3 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರವಾಸ –ಜುಲ್ಮಾನೆ.**<br><br>**(3) ಯಾವುದೇ ಒಬ್ಬ ವ್ಯಕ್ತಿ... ಯಾವುದೇ ರೂಪದಲ್ಲಿ ಮಗುವನ್ನು ಒಳಗೊಂಡಿರುವ ಕಾಮಪ್ರಚೋದಕ ಲೈಂಗಿಕ ಚಿತ್ರವನ್ನು ಎಂತಹದೇ** |

# Information Technology act 2000
# ಮಾಹಿತಿ ತಂತ್ರಜ್ಞಾನ ಕಾಯ್ದೆ–2000

| ಅಪರಾಧ | ವ್ಯಾಖ್ಯಾನ |
|---|---|
| ಕಲಂ– 67B<br>ಮಕ್ಕಳನ್ನು ಲೈಂಗಿಕವಾಗಿ ದುರುಪಯೋಗ ಪಡಿಸಿದುದರ ವಿಷಯ ಬಿತ್ತರಿಸಿದರೆ/ ಪ್ರಕಾಶಿಸಿದರೆ<br>Punishment for publishing or transmitting of material, depicting children in sexually explicit act etc in electronic form | ಕಲಂ–67B<br>ಎ) ಯಾವುದೇ ವಿದ್ಯುನ್ಮಾನ ಮಾಧ್ಯಮದ ಮೂಲಕ ಮಕ್ಕಳು ಲೈಂಗಿಕ ಚಟುವಟಿಕೆ ಕೃತ್ಯಗಳಲ್ಲಿ ತೊಡಗಿರುವುದನ್ನು ಪ್ರಕಟಿಸಿದರೆ. ಅಥವಾ<br>ಬಿ) ಯಾವುದೇ ವಿದ್ಯುನ್ಮಾನ ಮಾಧ್ಯಮದಲ್ಲಿ ಮಕ್ಕಳನ್ನು ಅಶ್ಲೀಲವಾಗಿ ಅಥವಾ ಅನೈತಿಕ ಕೃತ್ಯಗಳಲ್ಲಿ ತೊಡಗಿಸಿರುವ ಅಥವಾ<br>ಸಿ) ಮಕ್ಕಳನ್ನು ಅಂತರ್ಜಾಲದ ಮೂಲಕ ಲೈಂಗಿಕ ಕೃತ್ಯಗಳಲ್ಲಿ ತೊಡಗುವಂತೆ ಪ್ರೇರೇಪಿಸಿದರೆ, ಆಮೀಷ ಒಡ್ಡಿದರೆ ಅಥವಾ<br>ಡಿ) ಅಂತರ್ಜಾಲವನ್ನು ಮಕ್ಕಳ ದುರುಪಯೊಗ ಮಾಡುವಂತೆ ಸೌಕರ್ಯ ಕಲ್ಪಿಸಿದರೆ.<br>ಇ) ಯಾವುದೇ ವಿದ್ಯುನ್ಮಾನ ಮಾಧ್ಯಮದಲ್ಲಿ ತನ್ನ ದುರುಪಯೋಗ/ ಮಕ್ಕಳೊಂದಿಗೆ ಲೈಂಗಿಕ ಕೃತ್ಯಗಳಲ್ಲಿ ತೊಡಗಿರಬಹುದಾದ ಇತರೆ ದಾಖಲೆಗಳನ್ನು ಸೃಷ್ಟಿದರೆ.<br><br>ಮೊದಲ ಅಪರಾಧಕ್ಕೆ 5 ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು 10 ಲಕ್ಷ ದಂಡ<br>2 ನೇ ಮತ್ತು ನಂತರದ ಅಪರಾಧಕ್ಕೆ 7 ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು 10 ಲಕ್ಷ ಜುಲ್ಮಾನೆ ಅಥವ ಎರಡರಿಂಲೂ ದಂಡಿತನಾಗತಕ್ಕದ್ದು. |

| ಅಪರಾಧ | ವ್ಯಾಖ್ಯಾನ | ಶಿಕ್ಷೆ–ದಂಡ |
|---|---|---|
| **ಕಲಂ–16**<br>ಅಪರಾದಕ್ಕೆ ದುಷ್ಪ್ರೇರಣೆ<br>**Abetment of an offence** | ಯಾವುದೇ ವ್ಯಕ್ತಿ<br><br>ಅಪರಾಧಕ್ಕೆ ಯಾರೇ ವ್ಯಕ್ತಿಗೆ ಪ್ರಚೋದನೆ ಮಾಡಿದರೆ.<br><br>ಅಪರಾಧವನ್ನು ಮಾಡಲು ಯಾವುದೇ ಒಳಸಂಚಿನಲ್ಲಿ ಭಾಗವಹಿಸುವುದು.<br><br>ಅಪರಾಧವನ್ನು ಮಾಡುವುದಕ್ಕೆ ಉದ್ದೇಶಪೂರ್ವಕವಾಗಿ ಸಹಾಯ ಮಾಡುವುದು | **ಕಲಂ–17**<br><br>ಅಪರಾಧಕ್ಕೆ ದುಷ್ಪ್ರೇರಣೆಯ ಪರಿಣಾಮವಾಗಿ ಆ ಕೃತ್ಯವನ್ನು ಎಸಗಿದ್ದರೆ ಅಪರಾಧಕ್ಕಾಗಿ ಇರುವ ಶಿಕ್ಷೆಯನ್ನೆ ದುಷ್ಪ್ರೇರಣೆ ಮಾಡಿದ ವ್ಯಕ್ತಿಗೂ ನೀಡಲಾಗುತ್ತದೆ. |

| ಅಪರಾಧ | ವ್ಯಾಖ್ಯಾನ ಮತ್ತು ಶಿಕ್ಷೆ–ದಂಡ |
| --- | --- |
| **ಕಲಂ–18**<br>**ಅಪರಾಧ ಮಾಡಲು ಪ್ರಯತ್ನ**<br>**Attempt to commit an offence** | ಯಾವುದೇ ವ್ಯಕ್ತಿ.<br>ಈ ಕಾಯಿದೆಯಡಿ ಅಪರಾಧ ಎಂದು ಗುರುತಿಸಲಾದ ಕೃತ್ಯಗಳನ್ನು ಮಾಡಲು ಯತ್ನಿಸುತ್ತಾರೋ ಅಥವಾ ಇಂತಹ ಅಪರಾಧ ಮಾಡಲು ಯಾವುದೇ ಕೃತ್ಯ ಎಸಗಿದರೆ ಅವರು ಶಿಕ್ಷೆಯ ಅರ್ಧದಷ್ಟು ಅಥವಾ ಜೀವಾವಧಿ ಶಿಕ್ಷೆಯ ಅರ್ಧದಷ್ಟು ಕಾರಾವಾಸ ಮತ್ತು ಜುಲ್ಮಾನೆ ಒಳಗಾಗತಕ್ಕದ್ದು. |

# ಪ್ರಕರಣ ದಾಖಲಿಸುವ ಪ್ರಕ್ರಿಯೆಗಳು

- ಅಪರಾಧ ಜರುಗಿದ್ದರೆ ಅಥವಾ ಅಪರಾಧ ಜರುಗುವ ಸಂಭವವಿದ್ದರೆ

  ಎಸ್.ಜೆ.ಪಿ.ಯು/ಸ್ಥಳೀಯ ಪೊಲೀಸರಿಗೆ ಮಾಹಿತಿ **19(1)**
- ಪೊಲೀಸ್ ಅಧಿಕಾರಿಗಳು ಪ್ರಕರಣ ದಾಖಲಿಸುವುದು **19(1)**
- ಪ್ರಕರಣ ಸಂಖ್ಯೆಯನ್ನು ಬರವಣಿಗೆಯಲ್ಲಿ ನಮೂದಿಸುವುದು **19(2)(ಎ)**
- ದೂರುದಾರನಿಗೆ ಓದಿ ಹೇಳುವುದು. **19(2)(ಬಿ)**
- ಪೊಲೀಸ್ ಠಾಣೆಯಲ್ಲಿ ಅದಕ್ಕಾಗಿ ಇದ್ದ ಪುಸ್ತಕದಲ್ಲಿ ನಮೂದಿಸಬೇಕು. **19(2)(ಸಿ)**

**Children Cases Register 05.08.2024.docx**

# ಪ್ರಕರಣ ದಾಖಲಿಸುವ ಪ್ರಕ್ರಿಯೆಗಳು

- ದಾಖಲಿಸುವ ಭಾಷೆಯೂ ಮಗುವಿಗೆ ತಿಳಿಯುವ ಸರಳ ಭಾಷೆಯಲ್ಲಿರಬೇಕು. 19(3)
- ಅವಶ್ಯಕತೆ ಅನುಗುಣವಾಗಿ ಭಾಷಾಂತರ ವ್ಯವಸ್ಥೆ 19(4)
- ಪೊಲೀಸ್ ಅಧಿಕಾರಿಗಳು ಮಗುವಿನ ರಕ್ಷಣೆ ವ್ಯವಸ್ಥೆ ಮಾಡುವುದು 19(5)
- ಪ್ರಕರಣ ದಾಖಲಾದ 24 ಗಂಟೆ ಒಳಗೆ ವಿಶೇಷ ನ್ಯಾಯಲಯ ಮತ್ತು ಮಕ್ಕಳ ಕಲ್ಯಾಣ ಸಮಿತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಮಾಹಿತಿ ನೀಡುವುದು. 19(6)

POCSO Rules 2020 Form A,B 20.08.2024.docx

**SUPREME COURT OF INDIA ORIGINAL/APPELLATE JURISDICTION SUO MOTU WRIT PETITION (C) NO. 3 OF 2023 IN RE: RIGHT TO PRIVACY OF ADOLESCENTS**

**with CRIMINAL APPEAL NO.1451 OF 2024August 20, 2024.**

READ JUDGMENT.pdf

POCSO FIR E-mail ID DCPU.jpeg

karnataka-high-court 2318-22 POCSO.pdf

# ಕಾಯ್ದೆಯಡಿ ಅಪರಾಧಗಳು

- ದೂರು ನೀಡಲು ವಿಫಲವಾದರೆ ಕಲಂ 21(1)
- ದೂರು ದಾಖಲಿಸಿಕೊಳ್ಳದಿದ್ದರೆ ಕಲಂ 21(1)
  ಆರು ತಿಂಗಳವರೆಗೆ ವಿಸ್ತರಿಸಬಹುದಾದ ಶಿಕ್ಷೆ ಮತ್ತು ಜುಲ್ಮಾನೆ
- ಸಂಸ್ಥೆ ಮುಖ್ಯಸ್ಥರು ದೂರು ನೀಡಲು ವಿಫಲರಾದರೆ ಕಲಂ 21(2)
  ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಶಿಕ್ಷೆ ಮತ್ತು ಜುಲ್ಮಾನೆ.
- ಸುಳ್ಳು ದೂರು ನೀಡಿದರೆ ಕಲಂ 22(1)
  ಆರು ತಿಂಗಳವರೆಗೆ ವಿಸ್ತರಿಸಬಹುದಾದ ಶಿಕ್ಷೆ ಮತ್ತು ಜುಲ್ಮಾನೆ

ಮಗು ಸುಳ್ಳು ವರದಿಯನ್ನಾಗಲಿ/ ಸುಳ್ಳು ದೂರನ್ನಾಗಲಿ ದಾಖಲಿಸಿದರೆ ಕಲಂ 22(2)
ಅದಕ್ಕೆ ಯಾವುದೇ ಶಿಕ್ಷೆ ವಿಧಿಸಲಾಗಿಲ್ಲ.

- ಮಗುವಿನ ವಿರುದ್ಧ ಸುಳ್ಳು ದೂರು ನೀಡಿದರೆ ಕಲಂ 22(3)
  ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಶಿಕ್ಷೆ ಮತ್ತು ಜುಲ್ಮಾನೆ

| ಅಪರಾಧ | ವ್ಯಾಖ್ಯಾನ |
|---|---|
| ಕಲಂ–20<br>ಪ್ರಕರಣಗಳನ್ನು ವರದಿ ಮಾಡಲು ಮಾಧ್ಯಮ, ಸ್ಟುಡಿಯೋ ಮತ್ತು ಛಾಯಾಗ್ರಹಣ ಸೌಲಭ್ಯಗಳನ್ನು ಹೊಂದಿರುವವರ ಹೊಣೆಗಾರಿಕೆ<br>**Obligation of the media, studio and photographic facilities to report cases** | ಯಾವುದೇ ಮಾಧ್ಯಮದ / ಹೋಟೆಲಿನ / ಲಾಡ್ಜ್‌ನ / ಆಸ್ಪತ್ರೆಯ / ಕ್ಲಬ್‌ನ / ಸ್ಟುಡಿಯೋದ / ಛಾಯಾಗ್ರಹಣ ಸೌಲಭ್ಯಗಳು ಎಲ್ಲಿ ಇರುವುವೋ ಅಲ್ಲಿನ ಯಾರೇ ಸಿಬ್ಬಂದಿಯು ಯಾವುದೇ ಮಾಧ್ಯಮವನ್ನು ಬಳಸಿ ಯಾವ ಸಾಮಗ್ರಿಯು / ವಸ್ತುವು ಮಗುವನ್ನು ಲೈಂಗಿಕವಾಗಿ ಶೋಷಣೆಗೆ ಒಳಪಡಿಸುವಂಥದ್ದಾಗಿದೆಯೋ, (ಕಾಮ ಪ್ರಚೋದಕವಾದದು, ಲೈಂಗಿಕತೆಗೆ ಸಂಬಂಧಿಸಿದ್ದು ಮಗುವನ್ನು / ಮಕ್ಕಳನ್ನು ಅಶ್ಲೀಲವಾಗಿ ನಿರೂಪಣೆ ಮಾಡಿರುವಂಥದ್ದು ಸೇರಿದಂತೆ) ಆ ಯಾವುದೇ ಸಾಮಗ್ರಿಯು / ವಸ್ತುವು ತನ್ನ ಗಮನಕ್ಕೆ ಬಂದಾಗ ಅಂತಹ ಮಾಹಿತಿಯನ್ನು ಮಕ್ಕಳ ವಿಶೇಷ ಪೋಲೀಸ್ ಘಟಕಕ್ಕೆ / ಸ್ಥಳೀಯ ಪೋಲೀಸರಿಗೆ ಒದಗಿಸತಕ್ಕದ್ದು. |

| ಅಪರಾಧ | ವ್ಯಾಖ್ಯಾನ ಮತ್ತು ಶಿಕ್ಷೆ–ದಂಡ |
|---|---|
| **BNS 199C/ IPC 166A**<br>ಕಾನೂನಿನಡಿಯಲ್ಲಿನ ನಿರ್ದೇಶನವನ್ನು ಪಾಲಿಸದಿರುವ ಸಾರ್ವಜನಿಕ ನೌಕರನಿಗೆ ಶಿಕ್ಷೆ<br>**Public Servant Disobeying Direction under Law** | ಸಾರ್ವಜನಿಕ ನೌಕರನಾಗಿರುವ ಯಾವುದೇ ವ್ಯಕ್ತಿ...<br>1. ಒಂದು ಅಪರಾಧ / ಯಾವುದೇ ವಿಷಯದ ಸಂಬಂಧ ತನಿಖೆಯ ಉದ್ದೇಶಕ್ಕಾಗಿ ನಿರ್ದೇಶನವನ್ನು ತಿಳಿದಿದ್ದರೂ ಪಾಲನೆ ಮಾಡದಿದ್ದರೆ.<br>2. ಕಾನೂನಿನ ನಿರ್ದೇಶನವನ್ನು ಯಾವುದೇ ಒಬ್ಬ ವ್ಯಕ್ತಿಯ ಪರವಾಗಿ ಪಕ್ಷಪಾತ ಮಾಡುವುದಕೋಸ್ಕರ ಉದ್ದೇಶಪೂರ್ವಕವಾಗಿ ಉಲ್ಲಂಘನೆ ಮಾಡಿದರೆ.<br>3. **BNSS 173(1)** ರಡಿಯಲ್ಲಿ **BNS**– 64, 65, 66, 67, 68, 70, 71, 74, 76, 77, 79, 124, 143, 144 ರಡಿ ಯಲ್ಲಿ ಶಿಕ್ಷಾರ್ಹವಾದ ಸಂಜ್ಞೇಯ ಅಪರಾಧಗಳ ಸಂಬಂಧದಲ್ಲಿ ಆತನಿಗೆ ನೀಡಿದ ಯಾವುದೇ ಮಾಹಿತಿಯನ್ನು ದಾಖಲಿಸಿಕೊಳ್ಳಲು ವಿಫಲನಾದರೆ,<br>6 ತಿಂಗಳ ಕಾಲಾವಧಿಗೆ ಕಡಿಮೆಯಿಲ್ಲದಂತೆ 2 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರವಾಸ ಮತ್ತು ಜುಲ್ಮಾನೆ ಶಿಕ್ಷೆಗೆ ಒಳಗಾಗತಕ್ಕದ್ದು. |

# BNSS 173(1)/ CrPC 154
# ಸಂಜ್ಞೆಯ ಮೊಕದ್ದಮೆಗಳಲ್ಲಿ ಸಮಾಚಾರ
# (Information in cognizable cases)

ಬಿಎನ್‌ಎಸ್ ಕಲಂ–ಮಹಿಳೆಯೊಬ್ಬಳು ತನ್ನ ಮೇಲೆ 64, 65, 66, 67, 68, 69, 70, 71, 74, 75, 76, 77, 78, 79, 124 ಮೇರೆಗೆ ಅಪರಾಧವೆಸಗಲಾಗಿದೆ/ ಅಪರಾಧ ಎಸಗಲು ಪ್ರಯತ್ನ ಮಾಡಲ್ಪಟ್ಟಿದೆ ಎಂದು ಆರೋಪಿಸಿ ಮಾಹಿತಿಯನ್ನು ಕೊಟ್ಟಿದ್ದರೆ, ಒಬ್ಬ ಮಹಿಳಾ ಪೊಲೀಸ್ ಅಧಿಕಾರಿಯು/ ಯಾರೇ ಮಹಿಳಾ ಅಧಿಕಾರಿಯು ಅಂಥ ಮಾಹಿತಿಯನ್ನು ದಾಖಲು ಮಾಡತಕ್ಕದ್ದು.

ಎ. ಮೇಲ್ಕಂಡ ಕಲಂಗಳಲ್ಲಿ ನೊಂದ ಮಹಿಳೆ ದೈಹಿಕವಾಗಿ/ ಮಾನಸಿಕವಾಗಿ, ತಾತ್ಕಾಲಿಕವಾಗಿ/ ಖಾಯಂ ಆಗಿ ಅಸಮರ್ಥನಾಗಿದ್ದಾಳೆ ಎಂದು ತಿಳಿದು ಬಂದರೆ ಪೊಲೀಸ್ ಅಧಿಕಾರಿ ಮುಂದಿನ ವಿವರಗಳನ್ನು ಮಹಿಳೆಯ ಮನೆಯಲ್ಲಿ / ಅನುಕೂಲವಾಗುವ ಸ್ಥಳದಲ್ಲಿ, ದುಭಾಷಿಯ / ವಿಶೇಷ ಶಿಕ್ಷಣ ತಜ್ಞರ ಸಮ್ಮುಖದಲ್ಲಿ ದಾಖಲಿಕೊಳ್ಳಬೇಕು.

ಬಿ. ವಿವರ ದಾಖಲಿಸಿಕೊಳ್ಳುವ ಪ್ರಕ್ರಿಯೆಯನ್ನು ಚಿತ್ರೀಕರಣ(ವೀಡಿಯೋಗ್ರಾಫ್) ಮಾಡತಕ್ಕದ್ದು

ಸಿ. ಪೊಲೀಸ್ ಅಧಿಕಾರಿಯು, ಸಾಧ್ಯವಾದಷ್ಟು ಶೀಘ್ರವಾಗಿ BNSS 183(6)(ಎ)ರಡಿಯಲ್ಲಿ ನ್ಯಾಯಿಕ ದಂಡಾಧಿಕಾರಿಗಳಿಂದ ಆ ವ್ಯಕ್ತಿಯ ಹೇಳಿಕೆಯನ್ನು ಪಡೆಯತಕ್ಕದ್ದು.

## ಕಲಂ 42 ಪರ್ಯಾಯ ಶಿಕ್ಷೆ:

**ಈ ಕಾಯ್ದೆಯಡಿ ಅಥವಾ BNS ಕಲಂಗಳಾದ 64, 65, 66, 67, 68, 70, 71, 74, 76, 77, 79 ಮತ್ತು Information Technology act 2000 Sec-67B ಅಡಿಯಲ್ಲಿಯ ಒಂದು ಕೃತಿ/ ಚ್ಯುತಿಯಿಂದ ಅಪರಾಧವೆಸಗಲ್ಪಟ್ಟಿದ್ದು, ಆರೋಪಿ ಅಪರಾಧಿ ಎಂದು ಸಾಬೀತಾದರೆ, ಆ ವೇಳೆಯ ಯಾವುದೇ ಕಾನೂನು ಏನೇ ಹೇಳುತ್ತಿದ್ದರು, ಈ ಕಾಯ್ದೆಯಡಿ ಹಾಗೂ BNS ಅನ್ವಯ ಯಾವ ಶಿಕ್ಷೆ ಪ್ರಮಾಣದಲ್ಲಿ ತೀವ್ರವಾಗಿರುತ್ತದೆಯೋ ಅದನ್ನೇ ವಿಧಿಸಲಾಗುವುದು.**

**ಪ್ರಥಮ ವರ್ತಮಾನ ವರದಿಗೆ ಪೋಕ್ಸೋ ಮತ್ತು ಇತರೆ ಕಾಯ್ದೆಯ ಉಪಬಂಧಗಳನ್ನು ಅಳವಡಿಸುವುದು ನಿಯಮ 4(2)(ಎ)**

# ಮಾಧ್ಯಮಕ್ಕೆ ಸಂಬಂಧಿಸಿದಂತೆ ಕಾರ್ಯವಿಧಾನ ಕಲಂ-23

- (1) ಯಾರೇ ವ್ಯಕ್ತಿಯು, ಮಗುವಿನ ಗುಣ ಚಾರಿತ್ರ್ಯಕ್ಕೆ ಧಕ್ಕೆ ತರುವ ಯಾವುದೇ ವರದಿಯನ್ನು/ ಅಭಿಪ್ರಾಯಗಳನ್ನು ಯಾವುದೇ ಮಾಧ್ಯಮದಿಂದ ವರದಿ ಮಾಡತಕ್ಕದ್ದಲ್ಲ / ಅಭಿಪ್ರಾಯಗಳನ್ನು ಪ್ರಸ್ತುತ ಪಡಿಸತಕ್ಕದ್ದಲ್ಲ.
- (2) ಯಾವುದೇ ಮಾಧ್ಯಮದಲ್ಲಿ ಮಗುವಿನ ಹೆಸರು, ವಿಳಾಸ, ಭಾವಚಿತ್ರ, ಕೌಟುಂಬಿಕ ವಿವರಗಳು, ಶಾಲೆ, ನೆರೆಹೊರೆ/ ಮಗುವಿನ ಗುರುತನ್ನು ಬಹಿರಂಗ ಪಡಿಸಬಹುದಾದಂಥ ಯಾವುದೇ ಇತರ ವಿವರಗಳನ್ನೊಳಗೊಂಡ ಯಾವ ವರದಿಗಳನ್ನು ಬಹಿರಂಗ ಪಡಿಸತಕ್ಕದ್ದಲ್ಲ:
- ಬಹಿರಂಗ ಪಡಿಸುವುದು ಮಗುವಿನ ಹಿತಾಸಕ್ತಿಗೆ ಅನುಗುಣವಾಗಿದ್ದರೆ ಹಾಗೆ ಬಹಿರಂಗಪಡಿಸುವುದಕ್ಕೆ ವಿಶೇಷ ನ್ಯಾಯಾಲಯವು ಅನುಮತಿ ನೀಡಬಹುದು.
- (3) ಮಾಧ್ಯಮದ ಮಾಲೀಕನು ಆತನ ನೌಕರನ ಕೃತ್ಯಗಳಿಗೆ ಮತ್ತು ಕರ್ತವ್ಯ ಲೋಪದೋಷಗಳಿಗೆ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರನಾಗತಕ್ಕದ್ದು.
- (4) 23(1) ಮತ್ತು 23(2)ಉಲ್ಲಂಘಿಸುವ ಯಾರೇ ವ್ಯಕ್ತಿಯು, ಆರು ತಿಂಗಳುಗಳಿಗಿಂತ ಕಡಿಮೆಯಿಲ್ಲದ ಆದರೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದ ಶಿಕ್ಷೆ ಅಥವಾ ಜುಲ್ಮಾನೆ ಶಿಕ್ಷೆಗೆ ಒಳಗಾಗತಕ್ಕದ್ದು.
- ಜೆ.ಜೆ. ಕಾಯ್ದೆ-2015 ಕಲಂ-74

# ಹೇಳಿಕೆ ದಾಖಲಿಸುವಾಗ

- ಮಗುವಿಗೆ ಹಿತವೆನಿಸುವ ಸ್ಥಳದಲ್ಲಿ ದಾಖಲಿಸುವುದು. – 24 (1)
- ಕಾರ್ಯ ಸಾಧ್ಯವಾದಷ್ಟು ಮಟ್ಟಿಗೆ ಪಿಎಸ್ಐ. ದರ್ಜೆಗಿಂತ ಕಡಿಮೆ ಇರದ ಮಹಿಳಾ ಅಧಿಕಾರಿ ಹೇಳಿಕೆಯನ್ನು ದಾಖಲಿಸುವುದು. 24(1)/ BNSS-180/CrPC 161

  CrPC 161 BNSS 180.docx
- ದಾಖಲಿಸುವ ಅಧಿಕಾರಿ ಸಾದಾ ಉಡುಪಿನಲ್ಲಿರುವುದು. – 24 (2)
- ದೃಶ್ಯ, ಶ್ರವ್ಯ ಮಾಧ್ಯಮದ ಮೂಲಕ ಮಗುವಿನ ಹೇಳಿಕೆಯನ್ನು ದಾಖಲಿಸುವುದು. – 26 (4)
- ಪೋಷಕರು / ನಂಬುವ ವ್ಯಕ್ತಿ ಸಮಕ್ಷಮ ಹೇಳಿಕೆ ದಾಖಲು – 26 (1)
- ಆರೋಪಿತನ ಸಂಪರ್ಕಕ್ಕೆ ಬರದಂತೆ ಖಾತ್ರಿಪಡಿಸುವುದು. – 24 (3)
- ಮಕ್ಕಳನ್ನು ರಾತ್ರಿವೇಳೆ ಠಾಣೆಯಲ್ಲಿ ಇರಿಸುವಂತಿಲ್ಲ. – 24 (4)
- ವಿಶೇಷ ನ್ಯಾಯಾಲಯದ ನಿರ್ದೇಶನವಿಲ್ಲದ ಹೊರತು ಮಾಧ್ಯಮಕ್ಕೆ ಮಕ್ಕಳ ವಿವರ ಬಹಿರಂಗ ಪಡಿಸುವಂತಿಲ್ಲ. – 24 (5)
- ಅಗತ್ಯವಿದ್ದಲ್ಲಿ ಭಾಷಾಂತರಕಾರರು/ ದ್ವಿಭಾಷಾ ತಜ್ಞರು/ವಿಶೇಷ ತರಬೇತಿ ಪಡೆದ ಶಿಕ್ಷಕರು ಬಳಕೆ – 26(2&3)

# ಕಲಂ–25 ದಂಡಾಧಿಕಾರಿಯಿಂದ ಮಗುವಿನ ಹೇಳಿಕೆ ದಾಖಲಾತಿ

**ಕಲಂ–25 ಹೇಳಿಕೆ ದಾಖಲಾತಿಯ ಹೆಚ್ಚಿನ ಪ್ರಾವಧಾನಗಳು:**

(1) ಮಗುವಿನ ತಂದೆ–ತಾಯಿ/ ವಿಶ್ವಾಸವಿರುವ ವ್ಯಕ್ತಿ ಸಮಕ್ಷಮ

(2) ಅನುವಾದಕರು, ಅರ್ಥವಿವರಣೆಕಾರರು, ವ್ಯಾಖ್ಯಾನಕಾರರ ಸಹಾಯ ಪಡೆಯುವುದು. ಕಲಂ 19(4), ನಿಯಮ 5,

Request to CWC  for Translator.docx

POCSO - Model Guidelines Section 39.pdf

- ಡಿ.ಸಿ.ಪಿ.ಯು. ಇವರನ್ನು ನೇಮಕ ಮಾಡಿ ಪಟ್ಟಿ ಮಾಡುವುದು.
  ನಿಯಮ3(1)

- ಪೊಲೀಸ್ ಠಾಣೆ/ಎಸ್.ಜೆ.ಪಿ.ಯು/ ವಿಶೇಷ ನ್ಯಾಯಲಯಕ್ಕೆ ಅಗತ್ಯವಿದ್ದಲ್ಲಿ ಡಿ.ಸಿ.ಪಿ.ಯು. ಇವರನ್ನು ಒದಗಿಸತಕ್ಕದ್ದು
  ನಿಯಮ 3(1)

# ತುರ್ತು ಚಿಕಿತ್ಸೆ

- ಅಂಗಭೇದಕ/ತೀವ್ರತರ ಅಂಗಭೇದಕ ಲೈಂಗಿಕ ಹಲ್ಲೆ, ಲೈಂಗಿಕ/ತೀವ್ರತರ ಲೈಂಗಿಕ ಹಲ್ಲೆ, ಲೈಂಗಿಕ ಕಿರುಕುಳ ಪ್ರಕರಣದಲ್ಲಿ ಮಗುವಿಗೆ ಆರೈಕೆ, ವಸತಿ, ವೈದ್ಯಕೀಯ ಚಿಕತ್ಸೆ ಬೇಕಾದಲ್ಲಿ 24 ಗಂಟೆಯೊಳಗೆ ವ್ಯವಸ್ಥೆ ಮಾಡಿ ಠಾಣಾ ದಿನಚರಿಯಲ್ಲಿ ನಮೂದಿಸುವುದು.

  **ಕಲಂ–27 & ನಿಯಮ –5**

- ಎಫ್.ಐ.ಆರ್ ದಾಖಲಾಗದಿದ್ದರೂ ವೈದ್ಯಕೀಯ ಚಿಕಿತ್ಸೆಗೆ ಅವಕಾಶ.

  **ಕಲಂ 27 (1), ನಿಯಮ 5(3) /**

  *SC in State of Karnataka V Manjanna*

  *(2000 SC(Crl)031/CriLJ3471/ 2006(6) SCC188 )*

- **IPC 166B / BNS 200**

- **CrPC 357C / BNSS 397**

| ಅಪರಾಧ | ವ್ಯಾಖ್ಯಾನ ಮತ್ತು ಶಿಕ್ಷೆ–ದಂಡ |
|---|---|
| **CrPC 357 C**<br><br>**BNSS-397**<br>ಬಾಧಿತರಿಗೆ ಚಿಕಿತ್ಸೆ<br>**Treatment of victim** | ಎಲ್ಲಾ ಆಸ್ಪತ್ರೆಗಳಲ್ಲಿ ಅವು ಸರ್ಕಾರಿ / ಖಾಸಗಿ ಆಸ್ಪತ್ರೆಯಾಗಿರಲಿ, ಅವುಗಳನ್ನು ಕೇಂದ್ರ/ ರಾಜ್ಯ ಸರ್ಕಾರ/ ಯಾರೇ ಇತರೆ ವ್ಯಕ್ತಿಯು ನಡೆಸುತ್ತಿರಲಿ **BNS-2023 Sec 64, 65, 66, 67, 68, 70, 71** & **POCSO Sec 4, 6, 8, 10** ರಲ್ಲಿ ಹೇಳಿರುವ ಸಂತ್ರಸ್ತರಾದ ವ್ಯಕ್ತಿಗಳಿಗೆ ತತ್ಕ್ಷಣವೇ ಉಚಿತವಾಗಿ ಪ್ರಥಮ ಚಿಕಿತ್ಸೆಯನ್ನು/ ವೈದ್ಯಕೀಯ ಚಿಕಿತ್ಸೆಯನ್ನು ಕೊಡತಕ್ಕದ್ದು. |

| ಅಪರಾಧ | ವ್ಯಾಖ್ಯಾನ ಮತ್ತು ಶಿಕ್ಷೆ–ದಂಡ |
| --- | --- |
| **IPC 166B / BNS-200**<br><br>ಬಾಧಿತರಿಗೆ ಚಿಕಿತ್ಸೆ ನೀಡುದುದ್ದಕ್ಕಾಗಿ ಶಿಕ್ಷೆ<br>**Punishment for non-treatment of victim** | ಯಾವುದೇ ವ್ಯಕ್ತಿಯು,<br>ಕೇಂದ್ರ/ ರಾಜ್ಯ ಸರ್ಕಾರ, ಸಾರ್ವಜನಿಕ / ಖಾಸಗಿ, ಸ್ಥಾನಿಯ ಸರ್ಕಾರಗಳ ಅಧೀನದಲ್ಲಿದ್ದು / ಯಾವುದೇ ಇತರ ವ್ಯಕ್ತಿಯಿಂದ ನಿರ್ವಹಿಸುತ್ತಿರುವ ಒಂದು ಆಸ್ಪತ್ರೆಯ ಉಸ್ತುವಾರಿಯಲ್ಲಿದ್ದ, **BNSS–397** (ಬಾಧಿತರಿಗೆ ಚಿಕಿತ್ಸೆ) ಉಪಬಂಧಗಳನ್ನು ಉಲ್ಲಂಘನೆ ಮಾಡಿದರೆ.<br><br>1 ವರ್ಷದವರೆಗೆ ವಿಸ್ತರಿಸಬಹುದಾದ ಕಾರವಾಸ ಮತ್ತು ಜುಲ್ಮಾನೆ ಶಿಕ್ಷೆಗೆ ಒಳಗಾಗತಕ್ಕದ್ದು. |



ಜಿಲ್ಲಾಡಳಿತ, ಬಾಗಲಕೋಟೆ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಗಲಕೋಟೆ
ಸಖಿ-ಒನ್ ಸ್ಟಾಫ್ ಸೆಂಟರ್
ನೊಂದ ಮಹಿಳೆ, ಹಲವು ಸಮಸ್ಯೆ, ಒಂದು ಸೂರು, ಹಲವು ಸೇವೆ..........
ನೊಂದ ಮಹಿಳೆಗೆ ಸಖಿ ಒನ್ ಸ್ಟಾಫ್ ಕೇಂದ್ರದಲ್ಲಿ ದೊರೆಯುವ ಸೇವೆಗಳು
ವೈದ್ಯಕೀಯ ನೆರವು
ಕಾನೂನು ನೆರವು
ಆಪ್ತ ಸಮಾಲೋಚನೆ ನೆರವು
ಸಖಿ ನಿಮ್ಮೊಂದಿಗೆ ದಿನದ 24 ಗಂಟೆ 365 ದಿನಗಳು
"ಹಿಂಸೆ ರಹಿತ ಜೀವನ ನಮ್ಮ ಹಕ್ಕು"
ಪೊಲೀಸ್ ನೆರವು
ಸಾಮಾಜಿಕ ಕಾರ್ಯಕರ್ತರ ನೆರವು
ತಾತ್ಕಾಲಿಕ ವಸತಿ ಸೌಲಭ್ಯ
ಮಹಿಳೆಯ ಬಗ್ಗೆ ಗೌಪ್ಯತೆಯನ್ನು ಕಾಪಾಡುವುದರ ಜೊತೆಗೆ ಮಹಿಳೆಗೆ ಒಂದೇ ಸೂರಿನಡಿಯಲ್ಲಿ ಸೌಲಭ್ಯಗಳು ದೊರಕುವುದರಿಂದ, ಇತರೇ ಮುಜುಗರ ಹಾಗೂ ವಿಳಂಬ ಪ್ರಸಂಗವನ್ನು ತಡೆಗಟ್ಟಲಾಗುತ್ತದೆ.
- ಕುಟುಂಬ, ಸಮುದಾಯ ಮತ್ತು ಕೆಲಸದ ಸ್ಥಳಗಳು, ಖಾಸಗಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಹಿಂಸಾಚಾರದಿಂದ ಬಳಲುತ್ತಿರುವ ಮಹಿಳೆಯರಿಗೆ ಸಹಾಯಹಸ್ತ ನೀಡುವ ಉದ್ದೇಶದಿಂದ "ಸಖಿ" ಒನ್ ಸ್ಟಾಪ್ ಸೆಂಟರ್‌ನ್ನು ಪ್ರಾರಂಭಿಸಲಾಗಿದೆ.
ಉದ್ದೇಶಗಳು :
- ಯಾವುದೇ ರೀತಿಯ ತುರ್ತು ಹಾಗೂ ತುರ್ತು ರಹಿತ ಸಮಸ್ಯೆಗಳಿಗೆ ಒಂದೇ ಸೂರಿನಡಿಯಲ್ಲಿ ವೈದ್ಯಕೀಯ, ಕಾನೂನು ಸಮಾಲೋಚನೆ ಹಾಗೂ ತಾತ್ಕಾಲಿಕ ವಸತಿ ಮೊದಲಾದ ಸೇವೆಗಳನ್ನು ನೀಡುವುದು.
- ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಒಂದೇ ಕಡೆಯಲ್ಲಿ ಹಲವು ಸೌಲಭ್ಯಗಳನ್ನು ಒದಗಿಸುವುದು ಪ್ರಥಮ ಧ್ಯೇಯವಾಗಿದ್ದು ಹಾಗೂ ಈ ಸೇವೆಗಳನ್ನು ಒದಗಿಸುವ ಸಲುವಾಗಿ ನವನಗರ ಬಾಗಲಕೋಟೆಯ ಸರ್ಕಾರಿ ಆಸ್ಪತ್ರೆ ಸಂಕೀರ್ಣದಲ್ಲಿ "ಸಖಿ" ಕೇಂದ್ರವು ಕಾರ್ಯನಿರ್ವಹಿಸುತ್ತಿದೆ. "ಸಖಿ" ಕೇಂದ್ರವು ದಿನಕ್ಕೆ 24 ಗಂಟೆ ಸೇವೆ ಒದಗಿಸುತ್ತಿದೆ.
ಭಾರತ ಸರ್ಕಾರದ ಯೋಜನೆ
ಸಖಿ-ಒನ್ ಸ್ಟಾಫ್ ಸೆಂಟರ್
ಜಿಲ್ಲಾ ಆಸ್ಪತ್ರೆ ಸಂಕೀರ್ಣ, ಬಾಗಲಕೋಟೆ.
ಸಖಿ ಕೇಂದ್ರದ ಇ-ಮೇಲ್ : sakhibgk9@gmail.com
ದೂರವಾಣಿ ಸಂಖ್ಯೆ : 08354-235182, ಮೊಬೈಲ್ : 7022239106, 8971079011 8310126873, 9844434490
"ಗೌರವಯುತವಾಗಿ, ಸಂತೋಷವಾಗಿ, ಸುರಕ್ಷತೆಗಾಗಿ, ಬಾಳುವುದು ನಮ್ಮ ಹಕ್ಕು"
ಉಚಿತ ಮಕ್ಕಳ ಸಹಾಯವಾಣಿ 1098
ಉಚಿತ ಮಹಿಳಾ ಸಹಾಯವಾಣಿ 181
ತುರ್ತು ಪರಿಸ್ಥಿತಿ ಯಾವುದೇ ಇರಲಿ 112 ಒಂದೇ ನಂಬರ್ ಡಯಲ್ ಮಾಡಿ

# ಮಗುವಿನ ವೈದ್ಯಕೀಯ ಪರೀಕ್ಷೆ ಕಲಂ–27

## CrPC 164A/ BNSS 184 / ನಿಯಮ–4(2)(ಸಿ)

- ನೊಂದ ಮಗುವಿನ ವೈದ್ಯಕೀಯ ಪರೀಕ್ಷೆಯನ್ನು, ದೂರು ದಾಖಲಾಗದಿದ್ದರು, BNSS 184 ಅನ್ವಯ ನಡೆಸತಕ್ಕದ್ದು.
- ಹೆಣ್ಣು ಮಗುವಾಗಿದ್ದಲ್ಲಿ ಮಹಿಳಾ ವೈದ್ಯರು ಪರೀಕ್ಷೆ ನಡೆಸುವುದು.
  ಕಲಂ 27(2)
- ಮಗುವಿನ ಪೋಷಕರು / ನಂಬಿಕಸ್ತ ವ್ಯಕ್ತಿಯ ಸಮಕ್ಷಮ ಪರೀಕ್ಷೆ
  ಕಲಂ 27(3)
- ಮೇಲಿನ ವ್ಯಕ್ತಿಗಳಿಲ್ಲದಿದ್ದಲ್ಲಿ ಆಸ್ಪತ್ರೆ ವೈದ್ಯಕೀಯ ಮುಖ್ಯಸ್ಥರು ನೇಮಕ ಮಾಡಿದ ವ್ಯಕ್ತಿಯ ಸಮಕ್ಷಮ ಪರೀಕ್ಷೆ ನಡೆಸುವುದು. ಕಲಂ 27(4)
- ವಿಧಿವಿಜ್ಞಾನ ಪರೀಕ್ಷೆಗಾಗಿ ಸಂಗ್ರಹಿಸಿದ ಮಾದರಿಗಳನ್ನು ಶೀಘ್ರವಾಗಿ ಕಳಿಸಿಕೊಡುವುದು. (ನಿಯಮ 4(2)(ಡಿ))
- **Victim Medicle 01.08.2024.docx**

# ವೈದ್ಯಕೀಯ ಪರೀಕ್ಷೆ – BNSS 184/ CrPC 164A

- ನೋಂದಾಯಿತ ವೈದ್ಯಕೀಯ ವೃತ್ತಿನಿರತರಿಂದ ನಡೆಸುವುದು, ಮಾಹಿತಿ ಸ್ವೀಕರಿಸಿದ 24 ಗಂಟೆಯೊಳಗೆ ಮಹಿಳೆಯನ್ನು ವೈದ್ಯರ ಬಳಿಗೆ ಕಳುಹಿಸತಕ್ಕದ್ದು.

  BNSS 184(1)/ 164A**(1)** CrPC

- ವಿಳಂಬವಿಲ್ಲದೇ ನಡೆಸುವುದು. ಹೆಸರು, ವಿಳಾಸ, ವಯಸ್ಸು, ಶರೀರದಿಂದ ಪಡೆಯಲಾದ ವಸ್ತುವಿನ ವಿವರಣೆ, ದೇಹದ ಗಾಯದ ಗುರುತು, ಸಾಮಾನ್ಯ ಮಾನಸಿಕ ಸ್ಥಿತಿ, ಪಡೆಯಲಾದ ವಸ್ತುಗಳ ಸರಿಯಾದ ವಿವರಣೆ ನಮೂದಿಸುವುದು.


  BNSS 184(2)/ 164A(2) CrPC

- ಖಚಿತ ಕಾರಣಗಳನ್ನು ನಮೂದಿಸುವುದು. BNSS 184(3)/ 164A(3) CrPC
- ಸಮ್ಮತಿ ನೀಡಿದ ಬಗ್ಗೆ ನಮೂದಿಸುವುದು BNSS 184(4)/ 164A(4) CrPC
- ಪರೀಕ್ಷೆ ಪ್ರಾರಂಭ ಮತ್ತು ಮುಕ್ತಾಯದ ಸಮಯ.BNSS 184(5)/ 164A(5) CrPC
- ತನಿಖಾಧಿಕಾರಿಗೆ ವರದಿ ರವಾನೆ. BNSS 184(6)/ 164A(6) CrPC

# ವೈದ್ಯಕೀಯ ಪರೀಕ್ಷೆ

- Department of Health & Research Guidelines (DHR)-2013 ರ ಪ್ರಕಾರ ಪರೀಕ್ಷೆ ನಡೆಸುವುದು
- ಪೋಷಕರ ಒಪ್ಪಿಗೆ ಪಡೆಯುವುದು.
- ವಯಸ್ಸು, ಎತ್ತರ, ಸಾಮಾನ್ಯ ಮಾಹಿತಿ.
- ದೈಹಿಕ ಮತ್ತು ಹೊರಗಿನ ಗಾಯಗಳು.
- ಗುಪ್ತಾಂಗಗಳ ಗಾಯಗಳು.
- ಲೈಂಗಿಕ ಅಪರಾಧದ ಇತಿಹಾಸ.
- ವೈದ್ಯಕೀಯ ಇತಿಹಾಸ
- ಸಾಮಾನ್ಯ ದೈಹಿಕ ಪರೀಕ್ಷೆ.
- ನಿರ್ದಿಷ್ಟ ಪರೀಕ್ಷೆ
- ಸ್ಯಾಂಪಲ್ ಕಲೆಕ್ಷನ್/ಎಫ್.ಎಸ್.ಎಲ್. ಕಲೆಕ್ಷನ್.
- ತಾತ್ಕಾಲಿಕ ಅಭಿಪ್ರಾಯ/ಅಂತಿಮ ಅಭಿಪ್ರಾಯ.

GUIDELINES
2012 - 14
MHFW Guidelines & Protocols for Victims of sexual vil.pdf
18
CrPC 164A BNSS 184.docx




Even if Medical opinion negative still Rape/ Sexual assault cannot be ruled out

# ಕಲಂ 40 ನ್ಯಾಯವಾದಿಗಳ ಸಹಾಯ ಪಡೆಯುವ ಮಗುವಿನ ಹಕ್ಕು.

- ಮಗುವಿನ ತಂದೆ-ತಾಯಿ, ಪೋಷಕರು ತಮ್ಮ ಇಷ್ಟದ ನ್ಯಾಯಾವಾದಿಗಳನ್ನು ಆರಿಸಿಕೊಳ್ಳಬಹುದು.

- ನ್ಯಾಯವಾದಿಗಳ ವೆಚ್ಚವನ್ನು ಭರಿಸಲು ಅಸಮರ್ಥರಾಗಿದ್ದರೇ, ಕಾನೂನು ಸೇವಾ ಪ್ರಾಧಿಕಾರ ಅವರಿಗೆ ನ್ಯಾಯವಾದಿಗಳನ್ನು ಒದಗಿಸಬೇಕು.

ನಿಯಮ 4(3)(f)

# ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ನಿಯಮಗಳು 2020

- ನಿಯಮ 4 ಮಗುವಿನ ಪಾಲನೆ ಮತ್ತು ಸಂರಕ್ಷಣೆಗೆ ಸಂಬಂಧಿಸಿದ ಪ್ರಕ್ರಿಯೆ.
- (1) ಪ್ರಕರಣದ ಬಗ್ಗೆ ಮಾಹಿತಿ ನೀಡಿದ ವ್ಯಕ್ತಿಗೆ ಪೊಲೀಸ್ ಅಧಿಕಾರಿ ತನ್ನ ಹೆಸರು, ಹುದ್ದೆ, ದೂರವಾಣಿ ಸಂಖ್ಯೆ ಹಾಗೂ ತನ್ನ ಮೇಲ್ವಿಚಾರಣಾಧಿಕಾರಿ ಬಗ್ಗೆ ಮಾಹಿತಿ.
- (2) ಅಪರಾಧದ ಬಗೆಗಿನ ಮಾಹಿತಿಯನ್ನು ಮಕ್ಕಳ ಸಹಾಯವಾಣಿಯು 1098 ಅಂತಹ ಮಾಹಿತಿಯನ್ನು ಎಸ್.ಜೆ.ಪಿ.ಯು/ಸ್ಥಳೀಯ ಪೊಲೀಸರಿಗೆ ಕೂಡಲೇ ವರದಿ ಮಾಡಬೇಕು.
- ಮಗುವಿಗೆ ತುರ್ತು ವೈದ್ಯಕೀಯ ಚಿಕಿತ್ಸೆ ಅವಶ್ಯಕತೆ ಇದ್ದಲ್ಲಿ ಅಗತ್ಯ ವ್ಯವಸ್ಥೆ ಮಾಡಬೇಕು
- ಮಗುವಿಗೆ ಸಮಾಲೋಚನೆಯೂ ಒಳಗೊಂಡಂತೆ ಬೆಂಬಲಿಸುವ, ಲಭ್ಯವಿರುವ ಸೇವೆಗಳು, ಪರಿಹಾರಗಳ ಬಗ್ಗೆ ಮಾಹಿತಿ. ನಮೂನೆ–ಎ
- (8) ಸಿ.ಡಬ್ಲ್ಯೂ.ಸಿ ಯಿಂದ ಸಹಾಯ ವ್ಯಕ್ತಿಯ ನಿಯೋಜನೆ.
- (9) ಸಹಾಯ ವ್ಯಕ್ತಿಯೂ ವಿಷಯದ ಗೌಪ್ಯತೆಯನ್ನು ಕಾಪಾಡಿಕೊಳ್ಳಬೇಕು.

# ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ನಿಯಮಗಳು 2020

- ನಿಯಮ 4 ಮಗುವಿನ ಪಾಲನೆ ಮತ್ತು ಸಂರಕ್ಷಣೆಗೆ ಸಂಬಂಧಿಸಿದ ಪ್ರಕ್ರಿಯೆ.
- (10) ಪೊಲೀಸರು ಸಹಾಯ ವ್ಯಕ್ತಿಯ ನೇಮಕದ ಬಗ್ಗೆ 24 ಘಂಟೆಯೊಳಗಾಗಿ ವಿಶೇಷ ನ್ಯಾಯಾಲಯಕ್ಕೆ ಲಿಖಿತ ಮಾಹಿತಿ ನೀಡಬೇಕು.
- (12) ಸಹಾಯ ವ್ಯಕ್ತಿಯಿಂದ ಸಿ.ಡಬ್ಲ್ಯೂ.ಸಿ ಗೆ ಮಾಸಿಕ ವರದಿ.
- (13) ಎಸ್‌ಜೆಪಿಯು/ ಸ್ಥಳೀಯ ಪೊಲೀಸರು ಆರೋಪಿಯ ಬಂಧನ, ಅವನು ಸಲ್ಲಿಸಿದ ಅರ್ಜಿ, ಇತರೆ ಬೆಳವಣಿಗಳ ಬಗ್ಗೆ ಮಗುವಿಗೆ, ತಂದೆ–ತಾಯಿ/ ಪೋಷಕರಿಗೆ/ ಸಹಾಯ ವ್ಯಕ್ತಿಯ ಗಮನಕ್ಕೆ ತರಬೇಕು.
- (14) ಎಸ್‌ಜೆಪಿಯು/ ಸ್ಥಳೀಯ ಪೊಲೀಸರು ಅಧಿನಿಯಮದಡಿ/ ನಮೂನೆ ಪ್ರಕಾರ ಲಭ್ಯವಿರುವ ಸೇವೆಗಳ ಬಗ್ಗೆ ತಿಳಿಸಬೇಕು. ಪ್ರಕರಣ ದಾಖಲಾದ 24 ಗಂಟೆಯೊಳಗೆ ನಮೂನೆ–ಬಿ ಯಲ್ಲಿ ವರದಿಯನ್ನು ಸಿಡಬ್ಲ್ಯೂಸಿಗೆ ಸಲ್ಲಿಸಬೇಕು.

# ಮಕ್ಕಳ ಕಲ್ಯಾಣ ಸಮಿತಿಗೆ ಮಗುವನ್ನು ಹಾಜರ್ಪಡಿಸುವುದು

- ಆರೋಪಿ ಅದೇ ಮನೆಯಲ್ಲಿ ವಾಸವಿದ್ದರೆ,
- ಪೋಷಕರ ನೆರವಿಲ್ಲದಿದ್ದರೆ,
- ಮಗು ಯಾವುದಾದರೂ ಸಂಸ್ಥೆಯಲ್ಲಿದ್ದರೆ,
- ಕಾರಣಗಳ ಸಮೇತ 24 ಗಂಟೆಯೊಳಗೆ ಹಾಜರುಪಡಿಸುವುದು.

ಕಲಂ–19(5)/ ನಿಯಮ 4(3)

JJ FORM NO- 17, TO BE USED WHILE PRODUCING THE CHILD INFRONT OF CWC (2).pdf

# ಸಹಾಯವ್ಯಕ್ತಿ ಬೇಕಾದಲ್ಲಿ

- ಮಕ್ಕಳ ಕಲ್ಯಾಣ ಸಮಿತಿಗೆ ಕೋರಿಕೆ ಸಲ್ಲಿಸುವುದು.
- ಸಹಾಯ ವ್ಯಕ್ತಿ ನೇಮಕವಾದ ಬಗ್ಗೆ 24 ಗಂಟೆಯೊಳಗೆ ವಿಶೇಷ ನ್ಯಾಯಾಲಯಕ್ಕೆ ಲಿಖಿತ ವರದಿ ಸಲ್ಲಿಸುವುದು.

ನಿಯಮ 4(7)(9)

**Request to CWC for Support Person.docx**

**All District Support Person names 29.05.2021.pdf**

# ಸಹಾಯ ವ್ಯಕ್ತಿಗೆ ಮಾಹಿತಿ

ಪ್ರಕರಣದ ಬೆಳವಣಿಗೆ

- ತುರ್ತು ಸೇವೆಗಳ ಮಾಹಿತಿ
- ತನಿಖೆ / ವಿಚಾರಣೆಯ ಹಂತಗಳು
- ನೊಂದವರಿಗೆ ಪರಿಹಾರ ಮಾಹಿತಿ
- ಅಂತಿಮ ವರದಿ ಸಲ್ಲಿಸಿದ ಮಾಹಿತಿ
- ನ್ಯಾಯಾಲಯದ ವಿಚಾರಣಾ ದಿನಾಂಕಗಳ ಮಾಹಿತಿ
- ಆರೋಪಿತನ ಜಾಮೀನು, ಬಿಡುಗಡೆ ಮಾಹಿತಿ
- ತೀರ್ಪು/ಶಿಕ್ಷೆಯ ಬಗ್ಗೆ ಮಾಹಿತಿ. ನಿಯಮ 4(12)

# BNSS 193/ CrPC 173(1A)

- **BNS-2023 Sec 64,65, 66, 67, 68, 70, 71 & POCSO Sec 4, 6, 8, 10** ಪ್ರಕರಣಗಳಲ್ಲಿ ತನಿಖಾಧಿಕಾರಿಯು ಈ ಕುರಿತು ಮಾಹಿತಿಯನ್ನು ದಾಖಲಿಸಿಕೊಂಡ ದಿನಾಂಕದಿಂದ 2 ತಿಂಗಳೊಳಗೆ ಅಂತಿಮ ವರದಿಯನ್ನು ಘನ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಬೇಕಾಗಿರುತ್ತದೆ.

- **BNSS 193(7)** ಯಾವುದೇ ಹೇಳಿಕೆಯ, ಯಾವುದೇ ಭಾಗವು ವ್ಯವಹರಣೆಗಳ ವಸ್ತು ವಿಷಯಕ್ಕೆ ಸುಸಂಗತವಾಗಿಲ್ಲವೆಂದು/ ಅದನ್ನು ಆಪಾದಿತನಿಗೆ ಬಹಿರಂಗಪಡಿಸುವುದು **ನ್ಯಾಯದ ಹಿತದೃಷ್ಟಿಯಿಂದ ಅಗತ್ಯವಿಲ್ಲವೆಂದು** ಮತ್ತು **ಸಾರ್ವಜನಿಕ ಹಿತದೃಷ್ಠಿಯಿಂದ ಹಿತವಲ್ಲವೆಂದು** ಪೊಲೀಸ್ ಅಧಿಕಾರಿಯು ಅಭಿಪ್ರಾಯಪಟ್ಟರೆ ಹೇಳಿಕೆಯ ಆ ಭಾಗವನ್ನು ಸೂಚಿಸತಕ್ಕದ್ದು ಮತ್ತು ಅಪಾದಿತನಿಗೆ ಕೊಡಬೇಕಾದ ಪ್ರತಿಗಳಿಂದ ಆ ಭಾಗವನ್ನು ಬಿಟ್ಟುಬಿಡಲು ಮನವಿ ಮಾಡಿಕೊಳ್ಳುವ ಮತ್ತು ಹಾಗೆ ಮನವಿ ಮಾಡಿಕೊಳ್ಳಲು ಕಾರಣಗಳನ್ನು ತಿಳಿಸುವ **ಟಿಪ್ಪಣಿಯನ್ನು ಲಗತ್ತಿಸತಕ್ಕದ್ದು.**


Key Stake Holders
Special Juvenile Police Unit
Child Welfare Committee
District Child Protection Unit
Medical Officer
Special Court
Special Public Prosecutor
Support Person
Interpreter /Translator

# ಪರಿಹಾರ

- ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಮೂಲಕ ಪಡೆಯುವುದು.
- ಕರ್ನಾಟಕ ಸರ್ಕಾರ ಬಾಧಿತರಿಗೆ ನೀಡುವ ಪರಿಹಾರ ನಿಧಿ BNSS 396/ CrPC 357A

  ವಿಶೇಷ ನ್ಯಾಯಾಲಯ ನೇರವಾಗಿ ಬಾಧಿತ ಮಗುವಿಗೆ ಪರಿಹಾರಕ್ಕೆ ಆದೇಶಿಸಬಹುದು.

  **– ಪೋಕ್ಸೋ –33(8)**

General circular from the Karnataka High Court to Special courts for an award of compensation to victims of offenses under the POCSO act. Dtd 20.11.2020.pdf

- ವಿಶೇಷ ನ್ಯಾಯಾಲಯ ತಾತ್ಕಾಲಿಕ ಪರಿಹಾರ ಮತ್ತು ಅಂತಿಮ ಪರಿಹಾರದ ಆದೇಶಗಳನ್ನು ನೀಡಬಹುದು **ಪೋಕ್ಸೋ ನಿಯಮ–7**
- ಆದೇಶವಾದ 30 ದಿನಗಳಲ್ಲಿ ಸರ್ಕಾರ ಪರಿಹಾರ ನೀಡಬೇಕು. **– ನಿಯಮ–7(3)**
- ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ **– ಮಕ್ಕಳ ನಿಧಿ**

Request to DCPU for financial relief.docx

- ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, **– ನಿಯಮ 90(5)(6)**

  Child Victim Comensation.pdf

# ಕರ್ನಾಟಕ ಮಕ್ಕಳ ನಿಧಿ

- ಕರ್ನಾಟಕ ಮಕ್ಕಳ ನಿಧಿ ಸ್ಥಾಪನೆ – ಜೆಜೆ–2015 ಕಲಂ 105
- ಡಿಸಿಪಿಓ ಮತ್ತು ಜಿಲ್ಲಾಧಿಕಾರಿಗಳ ಜಂಟಿ ಖಾತೆ
- ದೌರ್ಜನ್ಯಕ್ಕೊಳಗಾದ ಮಕ್ಕಳಿಗೆ ಪರಿಹಾರ ನೀಡಿಕೆ
- ವೈದ್ಯಕೀಯ, ಆರೋಗ್ಯ, ಹೆಚ್ಚಿನ ಶಿಕ್ಷಣಕ್ಕಾಗಿ, ಪೋಕ್ಸೋ ಬಾಧಿತರಿಗೆ, ತಜ್ಞರು/ಭಾಷಾಂತರಕಾರರಿಗೆ ಗೌರವಧನ, ಬಾಲ ಮಂದಿರ/ಅರ್ಹ ಸಂಸ್ಥೆ ಮಕ್ಕಳಿಗೆ, 18 ವರ್ಷ ಪೂರ್ಣಗೊಂಡ ಬಾಲಮಂದಿರದ ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸ/ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಶುಲ್ಕ, ಕ್ರೀಡಾಕೂಟದಲ್ಲಿ ಭಾಗವಹಿಸಲು ಸಹಾಯ

# ಸ್ಥೈರ್ಯ ನಿಧಿ (ನಿರ್ಭಯಾ ನಿಧಿ)

- ಕರ್ನಾಟಕ ಸರ್ಕಾರ 2014 ರಲ್ಲಿ ಸ್ಥಾಪನೆ ಮಾಡಿದೆ.
- ಉಪ ನಿರ್ದೇಶಕರು, ಡಿ.ಡಬ್ಲ್ಯೂ.ಸಿ.ಡಿ ಮತ್ತು ಜಿಲ್ಲಾಧಿಕಾರಿಗಳ ಜಂಟಿ ಖಾತೆ
- ಲೈಂಗಿಕ ದೌರ್ಜನ್ಯ ಮತ್ತು ಆಸಿಡ್ ದಾಳಿಗೊಳಗಾದ ಮಹಿಳೆಯರಿಗೆ ಪರಿಹಾರ ನೀಡಿಕೆ
- ವೈದ್ಯಕೀಯ, ಖರ್ಚುವೆಚ್ಚಗಳು, ಹೆಚ್ಚಿನ ಚಿಕಿತ್ಸೆ, ಪುನರ್ವಸತಿಗಾಗಿ ಇತರೇ ಖರ್ಚು ವೆಚ್ಚಗಳಿಗಾಗಿ ನೀಡಿಕೆ.

## ಕರ್ನಾಟಕ ಸರ್ಕಾರ

ಸಂಖ್ಯೆ: ಮಮಇ 69 ಮಭಾಬ 2016

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:07.12.2016

### ತಿದ್ದುಪಡಿ

ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ವತಿಯಿಂದ ಕರ್ನಾಟಕ ಮಕ್ಕಳ ನಿಧಿಯನ್ನು ನಿರ್ವಹಣೆ ಮಾಡಲು ಮಾರ್ಗಸೂಚಿಯನ್ನು ಹೊರಡಿಸುವ ಬಗ್ಗೆ ದಿನಾಂಕ:15.10.2014ರಂದು ಹೊರಡಿಸಲಾದ ಸರ್ಕಾರಿ ಆದೇಶ ಸಂಖ್ಯೆ: ಮಮಇ 183 ಮಭಾಬ 2013ರಲ್ಲಿನ ಅನುಬಂಧ-1ರ ಕ್ರಮ ಸಂಖ್ಯೆ 1.ಎ ಮತ್ತು 1.ಸಿ ಗೆ ಕೆಳಕಂಡ ನಮೂನೆಯಲ್ಲಿ ವಿವರಿಸಿರುವಂತೆ ತಿದ್ದುಪಡಿ ಸೇರ್ಪಡಿಸಲಾಗಿದ್ದು, ಹಿಂದಿನ ಅನುಬಂಧಕ್ಕೆ ಬದಲಾಗಿ, ಈ ಕೆಳಗಿನ ಕೋಷ್ಟಕದಲ್ಲಿರುವಂತೆ ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

| ಕ್ರಮ ಸಂಖ್ಯೆ | ಹಿಂದಿನ ಆದೇಶದಲ್ಲಿ ನಮೂದಾಗಿರುವ ಅಂಶ | ತಿದ್ದುಪಡಿ ಮತ್ತು ಸೇರ್ಪಡೆ ಮಾಡಬೇಕಾಗಿರುವುದು. |
|---|---|---|
| I, ಎ | "ಲೈಂಗಿಕ ದೌರ್ಜನ್ಯಕ್ಕೊಳಗಾದ ಮಕ್ಕಳಿಗೆ ತುರ್ತು ವೈದ್ಯಕೀಯ ಚಿಕಿತ್ಸೆಗಾಗಿ (ದೂರನ್ನು ಸ್ವೀಕರಿಸಿಕೊಡಲೇ ಅಥವಾ ಆಸ್ಪತ್ರೆಗೆ ದಾಖಲಾದ ಕೂಡಲೇ) ರೂ.10,000/-ಗಳು" ಅನ್ನು ಪಾವತಿಸಲು ಅವಕಾಶವಿರುತ್ತದೆ. | ಎ."ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಸಂದರ್ಭಗಳಲ್ಲಿ ಪೊಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನ ವರದಿ ದಾಖಲಾಗಿ, ಆಸ್ಪತ್ರೆಗೆ ದಾಖಲಾಗಿ ವೈದ್ಯರ ಶಿಫಾರಸ್ಸನನ್ವಯ ಅವಶ್ಯಕ ತುರ್ತು ವೆಚ್ಚಗಳಾದ ಔಷಧಿ, ಆಹಾರ ಪ್ರಾಸಂಗಿಕ ವೆಚ್ಚಗಳಾದ ಬಟ್ಟೆ, ನೀರು, ವೈದ್ಯಕೀಯ ತಪಾಸಣೆ ವೆಚ್ಚ, ವೈದ್ಯಕೀಯ ತಪಾಸಣೆಗೆ ಕರೆದೊಯ್ಯಲು, ಪ್ರಯಾಣ ವೆಚ್ಚ ಇತ್ಯಾದಿ ವೆಚ್ಚ ಇವುಗಳಿಗೆ ಪ್ರಥಮವಾಗಿ ರೂ. 5,000/- ಗಳನ್ನು ಪಾವತಿಸುವುದು.<br>I.ಎ. ತದನಂತರ ತೀವ್ರ ಆಘಾತವಾಗಿ ಮಗು 3 ದಿನಕ್ಕಿಂತ ಹೆಚ್ಚಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬೇಕಾದ ಸಂದರ್ಭಗಳಲ್ಲಿ, ಹೆಚ್ಚುವರಿಯಾಗಿ ರೂ. 5,000/- ಪಾವತಿಸುವುದು". |
| ಸಿ | "ಆರೋಗ್ಯ ಸುಧಾರಣೆಗಾಗಿ ವೈದ್ಯರ ಶಿಫಾರಸ್ಸಿನನ್ವಯ ರೂ. 15,000/-" ಪಾವತಿಸಲು ಅವಕಾಶವಿರುತ್ತದೆ. | ಸಿ. ಮಗುವು ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರ ಆರೋಗ್ಯ ಸುಧಾರಣೆಗಾಗಿ, ಔಷಧೋಪಚಾರ ಮತ್ತು ಸಮಾಲೋಚನಾ ಸೇವೆಗಳಿಗಾಗಿ (ಫೀ). ಮಗುವಿನೊಂದಿಗೆ ಓಡಾಡುವ ಪ್ರಯಾಣವೆಚ್ಚ, ಇತ್ಯಾದಿಗಳಿಗಾಗಿ ರೂ.15,000/- ಗಳನ್ನು ಪಾವತಿಸುವುದು. |

ನಿರ್ದೇಶನಾಲಯ
09 DEC 2016
ICPS

...2.

| | | |
|---|---|---|
| II<br>1.1. | ಸೇರ್ಪಡೆ ಮಾಡಬೇಕಾಗಿರುವುದು. | 1.1.ಎ ಗ್ಯಾಸ್, ಸೀಮೆಎಣ್ಣೆ ಸ್ಟೋವ್ ಸಿಡಿತ ಹಾಗೂ ವಿದ್ಯುತ್ ಅಪಘಾತಕ್ಕೆ ಬಲಿಯಾಗಿ, ಸಾಧಾರಣ ಗಾಯಗಳುಂಟಾದಾಗ ವೈದ್ಯಕೀಯ ಚಿಕಿತ್ಸೆಗಾಗಿ ಪ್ರಥಮವಾಗಿ ರೂ.5,000/- ಗಳನ್ನು ಪಾವತಿಸುವುದು.<br>1.1.ಬಿ ಮೇಲಿನ ಅಂಶಗಳಿಗೆ ತೀವ್ರ ಗಾಯವಾದಾಗ ಹೆಚ್ಚುವರಿ ಚಿಕಿತ್ಸೆಗಾಗಿ ರೂ.10,000/-ಗಳನ್ನು ಪಾವತಿಸುವುದು. |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಂಧ್ಯಾ ಎಲ್. ನಾಯಕ್)
ಸರ್ಕಾರದ ಅಧೀನ ಕಾರ್ಯದರ್ಶಿ-1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560 001.
2. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
3. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬಹುಮಹಡಿ ಕಟ್ಟಡ, ಬೆಂಗಳೂರು.
4. ನಿರ್ದೇಶಕರು/ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಬೆಂಗಳೂರು.
6. ಉಪನಿರ್ದೇಶಕರು, ಎನ್.ಐ.ಸಿ, ಖನಿಜ ಭವನ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ-3, ಬೆಂಗಳೂರು.
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಇವರ ಆಪ್ತಕಾರ್ಯದರ್ಶಿ.
3. ಸರ್ಕಾರದ ಉಪ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು.

## ದಂಡ ಪ್ರಕಿಯಾ ಸಂಹಿತೆ ಕಲಂ 357–ಎ ಅಡಿಯಲ್ಲಿ ಪರಿಹಾರ ಕೋರಿ ಸಲ್ಲಿಸುವ ಅರ್ಜಿ ನಮೂನೆ

ಅಧ್ಯಕ್ಷರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ.

--------------ಇವರಿಗೆ.

| | | |
|---|---|---|
| 1. | ಅರ್ಜಿದಾರರ/ಬಾಧಿತರ ಹೆಸರು: | |
| 2. | ತಂದೆ: ಗಂಡನ ಹೆಸರು: | |
| 3. | ಪೂರ್ಣ ಅಂಚೆ ವಿಳಾಸ: | |
| 4. | ಅರ್ಜಿದಾರರ/ಭಾದಿತರ ವಯಸ್ಸು: | |
| 5. | ಉದ್ಯೋಗ ಮತ್ತು ವಾರ್ಷಿಕ ವರಮಾನ | |
| 6. | ಪರಿಹಾರ ಕೋರಿರುವ ಕಾರಣ: | |
| 7. | ಸಂತ್ರಸ್ತ/ಮೃತ ಹೊಂದಿದವರ ವಯಸ್ಸು: | |
| 8. | ಘಟನೆ ನಡೆದಿರುವ ದಿನಾಂಕ/ಸ್ಥಳ | |
| 9. | ಘಟನೆಗೆ ಸಂಬಂಧಪಟ್ಟ ಹಾಗೆ ಪ್ರಥಮ ವರ್ತಮಾನ ವರದಿ ದಾಖಲಾದ ದಿನಾಂಕ: | |
| 10. | ಘಟನೆಗೆ ಸಂಬಂಧಿಸಿದಂತೆ ವ್ಯಾಪ್ತಿ ಪೊಲೀಸರಿಗೆ ಮಾಹಿತಿ ನೀಡಲು ವಿಳಂಬವಾಗಿದೆತೇ (ಘಟನ ಜರುಗಿದ 48 ಗಂಟೆಯ ಒಳಗೆ ಮಾಹಿತಿ ನೀಡಬೇಕು) | ☐ ಹೌದು ☐ ಇಲ್ಲ |
| 11 | ವಿಳಂಬವಾಗಿದ್ದಲ್ಲಿ, ವಿಳಂಬಕ್ಕೆ ಕಾರಣ: | |
| 12. | ಅರ್ಜಿದಾರರ ಹಾಗೂ ಬಾಧಿತರ ಹೆಸರಿನಲ್ಲಿರುವ ಸ್ಥಿರ ಸ್ವತ್ತುಗಳ ವಿವರ: | |
| 13. | ಪ್ರಕರಣದ ಆರೋಪಿ ಪತ್ತೆಯಾಗಿರುವನೇ: | ☐ ಹೌದು ☐ ಇಲ್ಲ |
| 14. | ಆರೋಪಿ ಪತ್ತೆಯಾಗಿದ್ದಲ್ಲಿ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣ ಸಂಖ್ಯೆ: | ಪ್ರಕರಣ ಸಂಖ್ಯೆ:-------------------<br>☐ ಪ್ರಕರಣ ಇತ್ಯರ್ಥವಾಗಿದೆ.<br>☐ ಪ್ರಕರಣ ಇತ್ಯರ್ಥವಾಗಲು ಬಾಕಿ ಇದೆ |

| | | |
|---|---|---|
| 15. | ನ್ಯಾಯಾಲದ ಪ್ರಕರಣ ಇತ್ಯರ್ಥವಾಗಿದ್ದಲ್ಲಿ ಆರೋಪಿಗೆ ಶಿಕ್ಷೆ ವಿಧಿಸಲಾಗಿದೆಯೇ ಅಥವಾ ಆರೋಪಿಗೆ ಬಿಡುಗಡೆಯಾಗಿದೆಯೇ: | |
| 16. | ಭಾರತೀಯ ದಂಡ ಸಂಹಿತೆ ಕಲಂ 357ರಡಿಯಲ್ಲಿ ಆರೋಪಿಯು/ಅಪರಾಧಿಯು ಸಂತ್ರಸ್ತರಿಗೆ ಪರಿಹಾರ ನೀಡುವಂತೆ ನ್ಯಾಯಾಲಯವು ಆದೇಶಿಸಿದೆಯೇ: | ☐ ಹೌದು ☐ ಇಲ್ಲ |
| 17. | ನ್ಯಾಯಾಲಯವು ಆದೇಶಿಸಿರುವ ಪರಿಹಾರದ ಮೊತ್ತ | |
| 18 | ಆರೋಪಿ/ಅಪರಾಧಿಯು ನ್ಯಾಯಾಲಯದ ಆದೇಶದನ್ವಯ ಪರಿಹಾರದ ಮೊತ್ತವನ್ನು ಸಂತ್ರಸ್ತರಿಗೆ ನೀಡಿದ್ದಾನೆಯೇ: | ☐ ಹೌದು ☐ ಇಲ್ಲ |
| 19 | ಅರ್ಜಿಯೊಂದಿಗೆ ಸಲ್ಲಿಸಿರುವ ಅಡಕಗಳು: | 1. ನ್ಯಾಯಾಲದ ತೀರ್ಪಿನ ದೃಢೀಕೃತ ನಕಲು<br>2. ಪ್ರಥಮ ವರ್ತಮಾನ ವರದಿಯ ಯಥಾನಕಲು<br>3. ಫಿರ್ಯಾದಿನ ಯಥಾನಕಲು<br>4. ಮಹಜರಿನ ಯಥಾನಕಲು<br>5. ಶವ ತನಿಖಾ ವರದಿಯ ಯಥಾನಕಲು<br>6. ಗಾಯದ ಪ್ರಮಾಣ ಪತ್ರದ ಯಥಾನಕಲು<br>7. ಮೋಟಾರು ವಾಹನ ನಿರೀಕ್ಷಕರ ತನಿಖಾ ವರದಿಯ ಯಥಾನಕಲು<br>8. ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ (ತಹಶೀಲ್ದಾರರಿಂದ ಪಡೆದಿರುವುದು)<br>9. ಕುಟುಂಬ ಪಡಿತರ ಚೀಟಿಯ ನೋಟರಿಯವರಿಂದ ದೃಢೀಕರಿಸಿದ ಪ್ರತಿ ಅಥವಾ ಶಾಲಾ ದಾಖಲಾತಿ |

**—:ಘೋಷಣೆ:—**

ಈ ಮೇಲೆ ನಮೂದಿಸಿರುವ ಮಾಹಿತಿ ಮತ್ತು ವಿವರಗಳು ಸತ್ಯವಾಗಿದ್ದು, ಒಂದು ವೇಳೆ ಅವು ಅಸತ್ಯವೆಂದು ಕಂಡುಬಂದಲ್ಲಿ ತಾವು ತೆಗೆದುಕೊಳ್ಳುವ ತೀರ್ಮಾನಗಳಿಗೆ ಬದ್ಧನಾಗಿರುತ್ತೇನೆ: ಬದ್ಧಳಾಗಿರುತ್ತೇನೆ.

ಸ್ಥಳ:
ದಿನಾಂಕ:

ಅರ್ಜಿದಾರರ/ಬಾಧಿತರ ಸಹಿ.

# ವಿಶೇಷ ನ್ಯಾಯಾಲಯ ಕಲಂ–28
# ನ್ಯಾಯಾಲಯ ಪ್ರಕ್ರಿಯೆ–33

- ಪಾಟೀ ಸವಾಲು. ಕಲಂ– 33(2) / BNSS-308
- ಅಗತ್ಯ ವಿಶ್ರಾಂತಿ ನೀಡುವುದು. 33(3)
- ಮಗುಸ್ನೇಹಿ ಪ್ರಕ್ರಿಯೆ. 33(4)
- ನಂಬುವ ವ್ಯಕ್ತಿ ಸಮಕ್ಷಮ ವಿಚಾರಣೆ 37(1)
- ಪದೇ ಪದೇ ಕರೆಯುವಂತಿಲ್ಲ. 33(5)
- ಮಗುವಿನ ಘನತೆ ಕಾಪಾಡುವುದು 33(6)
- ವಿವರ ಬಹಿರಂಗಪಡಿಸದಿರುವುದು 33(7)
- ಪರಿಹಾರ 33(8)
- ಆರೋಪಿ ಮಗು ಸಂಪರ್ಕಕ್ಕೆ ಬರುವಂತಿಲ್ಲ 36(1) / BNSS-308
- ವಿಡಿಯೋ ಕಾನ್ಫರನ್ಸ್ / [illegible]ಮರ 36(2)

# ಕಲಂ–29 ಕೆಲವು ಅಪರಾಧಗಳ ಬಗ್ಗೆ ಪೂರ್ವಭಾವನೆ–Presume

- ಈ ಅಧಿನಿಯಮದ 3ನೇ, 5ನೇ, 7ನೇ ಮತ್ತು 9ನೇ ಪ್ರಕರಣಗಳ ಮೇರೆಗೆ ಯಾವುದೇ ಅಪರಾಧವನ್ನು ಮಾಡಿದಕ್ಕಾಗಿ ಅಥವಾ ಅಪರಾಧ ಮಾಡಲು ದುಷ್ಪ್ರೇರಣೆ ನೀಡಿದ್ದಕ್ಕಾಗಿ ಅಥವಾ ಅಪರಾಧ ಮಾಡಲು ಪ್ರಯತ್ನಿಸಿದ್ದಕ್ಕಾಗಿ ವ್ಯಕ್ತಿಯ ಮೇಲೆ ಕ್ರಮಕೈಗೊಂಡರೆ, ವಿಶೇಷ ನ್ಯಾಯಾಲಯವು, ತದ್ವಿರುದ್ಧವಾದುದು, ರುಜುವಾತಾಗದ ಹೊರತು, ಅಂಥ ವ್ಯಕ್ತಿಯು ಸಂದರ್ಭಾನುಸಾರ ಅಪರಾಧವನ್ನು ಮಾಡಿದ್ದಾನೆಂದು ಅಥವಾ ಅಪರಾಧ ಮಾಡಲು ದುಷ್ಪ್ರೇರಣೆ ನೀಡಿದ್ದಾನೆಂದು ಅಥವಾ ಅಪರಾಧ ಮಾಡಲು ಪ್ರಯತ್ನಿಸಿದ್ದಾನೆಂದು ಪೂರ್ವಭಾವನೆ ಮಾಡತಕ್ಕದ್ದು.

## ಕಲಂ 43 ಕಾಯ್ದೆಯ ಬಗ್ಗೆ ಜನ ಜಾಗೃತಿ:

ಮಕ್ಕಳು, ತಂದೆ–ತಾಯಿಯರು, ಪೋಷಕರು ಹಾಗೂ ಸಾರ್ವಜನಿಕರಲ್ಲಿ ಜಾಗೃತಿ.

ಎಲ್ಲಾ ಅಧಿಕಾರಿಗಳಿಗೆ ಈ ಕಾನೂನಿನ ತಿಳುವಳಿಕೆ ಹಾಗೂ ಪರಿಣಾಮಕಾರಿ ಅನುಷ್ಠಾನಕ್ಕಾಗಿ ತರಬೇತಿ.

# ಮೇಲ್ವಿಚಾರಣೆ ಮತ್ತು ಜಾಗೃತಿ ಕಲಂ–44

- ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ
- ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

CHILD LINE
1098
NIGHT & DAY

## ಚೈಲ್ಡ್ ಲೈನ್ (ಮಕ್ಕಳ ಸಹಾಯವಾಣಿ):

18 ವರ್ಷದೊಳಗಿನ ಮಕ್ಕಳು ಯಾವುದೇ ರೀತಿಯ ಸಂಕಷ್ಟ, ತೊಂದರೆ, ದೈಹಿಕ/ಮಾನಸಿಕ ಶಿಕ್ಷೆ, ಹಿಂಸೆ/ನಿರ್ಲಕ್ಷ್ಯ/ತಾರತಮ್ಯ ಹಾಗೂ ಲೈಂಗಿಕ ಆಧಾರಿತ ಯಾವುದೇ ರೀತಿಯ ಶೋಷಣೆಗೆ ಒಳಗಾದರೆ ತಕ್ಷಣ

**ಚೈಲ್ಡ್ ಲೈನ್‌ಗೆ ಕರೆ ಮಾಡಿ: 1098 ಅಥವಾ 112.**

ಯಾವುದೇ ಮಕ್ಕಳು ಓಡಿಹೋದರೆ, ಕಳ್ಳ ಸಾಗಾಣಿಕೆಗೆ ಒಳಪಟ್ಟರೆ, ದೌರ್ಜನ್ಯಕ್ಕೊಳಗಾದರೆ, ಬಾಲ ಮತ್ತು ಕಿಶೋರ ಕಾರ್ಮಿಕ ಪದ್ಧತಿಯಲ್ಲಿದ್ದರೆ, ಬಾಲ್ಯ ವಿವಾಹಕ್ಕೆ ಬಲಿಯಾದರೆ, ಭಿಕ್ಷಾಟನೆಯಲ್ಲಿದ್ದರೆ, ಬೀದಿಯಲ್ಲಿದ್ದರೆ, ನಿರಂತರ ಶಾಲೆಗೆ ಗೈರು ಹಾಜರಾದರೆ, ಯಾವುದೇ ವಿಪತ್ತಿಗೆ ಒಳಗಾದರೆ ಹಾಗೂ ಪೋಷಣೆ ಮತ್ತು ರಕ್ಷಣೆಯ ಅಗತ್ಯವಿದ್ದರೆ, ಕಾನೂನು ಸಂಘರ್ಷಕ್ಕೆ ಒಳಗಾದರೆ ಹಾಗೂ ಯಾವುದೇ ರೀತಿಯ ವ್ಯಸನಕ್ಕೆ ಒಳಗಾದರೆ ಅವರ ಸಂರಕ್ಷಣೆಗಾಗಿ

**ತಕ್ಷಣ ಕರೆ ಮಾಡಿ; 1098 ಅಥವಾ 112**

(ಈ ದೂರವಾಣಿ ಉಚಿತ ಹಾಗೂ ದೂರು ನೀಡಿದವರ ವಿವರ ಖಂಡಿತ ಬಹಿರಂಗವಾಗುವುದಿಲ್ಲ, ಗೌಪ್ಯತೆಯನ್ನು ಕಾಪಾಡಲಾಗುವುದು. ಮಕ್ಕಳೂ ಸೇರಿದಂತೆ ಈ ಸಂಖ್ಯೆಗೆ ಯಾವುದೇ ನಾಗರಿಕರು ಕರೆ ಮಾಡಬಹುದು)

# ಜವಾಬ್ದಾರಿ





CHILD LINE 1098 NIGHT & DAY

K.S.C.P.C.R.

# HANDLE WITH CARE




Old crow.
Modern crow.
Keep upgrading your skills.

# Thank You

***Rohith C.G***
***Police Trainer***
***SJPU-CID***
***Bengaluru-01***
***Ph: 9164048028***